ಸಂಪುಟ : 11 ಸಂಚಿಕೆ: 52 ಪುಟ : 4+2 ಬೆಲೆ: 3.00 ಶುಕ್ರವಾರ ಮಾರ್ಚ್ 27 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ

Volume : 11 Issue : 52 Pages : 4+2 Price : 3.00 Friday March 27 2026 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




## ಎ. 5ರಂದು ಡಾ. ಬಾಬು ಜಗಜೀವನ ರಾಂ 119ನೇ ಜಯಂತಿ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಹಸಿರು ಕ್ರಾಂತಿಯ ಹರಿಕಾರ ಹಾಗೂ ಭಾರತದ ಮಾಜಿ ಉಪಪ್ರಧಾನಿ ಡಾ|| ಬಾಬು ಜಗಜೀವನ ರಾಂ ಅವರ 119ನೇ ಜನ್ಮ ದಿನಾಚರಣೆಯನ್ನು ಎಪ್ರಿಲ್ 5, 2026 ರಂದು ಧಾರವಾಡ ಜಿಲ್ಲಾ ಆಡಳಿತದ ವತಿಯಿಂದ ವೈಭವಯುತವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಇದರ ಅಂಗವಾಗಿ ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಎಪ್ರಿಲ್ 5ರಂದು ಬೆಳಿಗ್ಗೆ 8 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಕಡ್ಡಾಯವಾಗಿ ಹಾಜರಾಗಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಬೇಕೆಂದು ಸೂಚಿಸಲಾಗಿದೆ.

ಅದೇ ದಿನ ಬೆಳಿಗ್ಗೆ 10 ಗಂಟೆಗೆ ತಮ್ಮ ಅಧೀನದಲ್ಲಿರುವ ಎಲ್ಲಾ ಕಚೇರಿ ಹಾಗೂ ಸಂಸ್ಥೆಗಳಲ್ಲಿ ಡಾ|| ಬಾಬು ಜಗಜೀವನ ರಾಂ ಅವರ ಜಯಂತಿಯನ್ನು ಕಡ್ಡಾಯವಾಗಿ ಆಚರಿಸಲು ಸರ್ಕಾರ ನಿರ್ದೇಶನ ನೀಡಿದೆ.

ಜಯಂತಿ ಅಂಗವಾಗಿ ಬೆಳಿಗ್ಗೆ 11 ಗಂಟೆಗೆ ಧಾರವಾಡದ ಜ್ಯುಬ್ಲಿ ವೃತ್ತದಲ್ಲಿರುವ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ|| ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಾಲಾರ್ಪಣೆ ನೆರವೇರಲಿದೆ.

ಬಳಿಕ ಕರ್ನಾಟಕ ವಿದ್ಯಾವರ್ಧಕ ಸಂಘದ ಡಾ|| ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಮುಖ್ಯ ವೇದಿಕೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮರು ಟೆಂಡರ್‌ಗೆ ಆಗ್ರಹ; 15 ದಿನಗಳಲ್ಲಿ ಕ್ರಮ ಕೈಗೊಳ್ಳದಿದ್ದರೆ ಧರಣಿ ಸತ್ಯಾಗ್ರಹ ಎಚ್ಚರಿಕೆ

## ಅವಧಿ ಮುಗಿದ ಪುರಸಭೆ ಮಳಿಗೆಗಳ ವಿರುದ್ಧ ಪ್ರತಿಭಟನೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಬಸ್‌ನಿಲ್ದಾಣದ ಎದುರಿನ ಪುರಸಭೆ ವಾಣಿಜ್ಯ ಸಂಕೀರ್ಣ ಹಾಗೂ ಭಾನು ಮಾರ್ಕೆಟ್‌ನ ಮಳಿಗೆಗಳ ಟೆಂಡರ್ ಅವಧಿ ಮುಗಿದಿದ್ದರೂ ಪುರಸಭೆ ಕ್ರಮ ಕೈಗೊಳ್ಳದಿರುವುದನ್ನು ಖಂಡಿಸಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗ ಮತ್ತು ಜಯ ಕರ್ನಾಟಕ ಸಂಘಟನೆಗಳು ಗುರುವಾರ ಪ್ರತಿಭಟನೆ ನಡೆಸಿದವು.

ಬಸ್ ನಿಲ್ದಾಣದ ಎದುರಿನ ವಾಣಿಜ್ಯ ಮಳಿಗೆಗಳ ಮುಂದೆ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಪುರಸಭೆ ಮುಖ್ಯಾಧಿಕಾರಿ ಮಹಾಂತೇಶ ಬೀಳಗಿ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಬಸವರಾಜ ಹಿರೇಮನಿ ಹಾಗೂ ಜಯ ಕರ್ನಾಟಕ ಸಂಘಟನೆಯ ಅಧ್ಯಕ್ಷ ಇಸ್ಮಾಯಿಲ್ ಆಡೂರ, ಭಾನು ಮಾರ್ಕೆಟ್ ಹಾಗೂ ಹೊಸ ಬಸ್ ನಿಲ್ದಾಣದ ಎದುರಿನ ಮಳಿಗೆಗಳ ಹರಾಜು ಅವಧಿ 2023ರಲ್ಲೇ ಮುಗಿದಿದ್ದರೂ ಮರು ಟೆಂಡರ್ ಕರೆಯದೆ ಮುಂದುವರಿಸಿರುವುದು ಅನುಮಾನಗಳಿಗೆ ಕಾರಣವಾಗಿದೆ ಎಂದು ಆರೋಪಿಸಿದರು. ಕಳೆದ ಮೂರು ವರ್ಷಗಳ ಬಾಡಿಗೆ ಹಣದ ಲೆಕ್ಕಪತ್ರ ಸ್ಪಷ್ಟವಾಗಿಲ್ಲವೆಂದು ಹೇಳಿದರು.

ಪುರಸಭೆಯ ವಾಣಿಜ್ಯ ಮಳಿಗೆಗಳ ಹರಾಜು ಪ್ರಕ್ರಿಯೆಯಲ್ಲಿ ನಿಯಮಗಳನ್ನು ಉಲ್ಲಂಘಿಸಲಾಗಿದ್ದು, ಕೆಲವು ಮಳಿಗೆಗಳನ್ನು ಸದಸ್ಯರೇ ಪಡೆದು ಇತರರಿಗೆ ಬಾಡಿಗೆಗೆ ನೀಡುತ್ತಿರುವುದು ಸರಿಯಲ್ಲ ಎಂದು ಟೀಕಿಸಿದರು. ಮಳಿಗೆಗಳಲ್ಲಿ ಸ್ವಚ್ಛತೆ ಕೊರತೆಯಿಂದ ದುರ್ವಾಸನೆ ಉಂಟಾಗುತ್ತಿದ್ದು, ಮೂಲಭೂತ ಸೌಲಭ್ಯಗಳ ಅಭಾವವೂ ಸ್ಪಷ್ಟವಾಗಿದೆ ಎಂದು ದೂರಿದರು.

> "ಪುರಸಭೆಯ ವಾಣಿಜ್ಯ ಮಳಿಗೆಗಳ ಹರಾಜು ಅವಧಿ 2023ರಲ್ಲೇ ಮುಗಿದಿದ್ದರೂ ಮರು ಟೆಂಡರ್ ಕರೆಯದೆ ನಿರ್ಲಕ್ಷ್ಯ ತೋರಲಾಗಿದೆ. ನಿಯಮ ಉಲ್ಲಂಘನೆ ನಡೆದಿದೆ ಎಂಬ ಅನುಮಾನಗಳಿದ್ದು, ಪಾರದರ್ಶಕವಾಗಿ ಹೊಸ ಟೆಂಡರ್ ಪ್ರಕ್ರಿಯೆ ನಡೆಸಬೇಕು. ಇಲ್ಲವಾದರೆ ಸಂಘಟನೆಗಳಿಂದ ಬೀಗ ಜಡಿದು ಧರಣಿ ಸತ್ಯಾಗ್ರಹ ನಡೆಸಲಾಗುವುದು." ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಮನವಿ ಸ್ವೀಕರಿಸಿದ ಮುಖ್ಯಾಧಿಕಾರಿ ಮಹಾಂತೇಶ ಬೀಳಗಿ, ಇಂದಿನಿಂದಲೇ ನೋಟಿಸ್ ನೀಡಲಾಗುತ್ತಿದ್ದು, 15 ದಿನಗಳೊಳಗಾಗಿ ಅವಧಿ ಮುಗಿದ ಮಳಿಗೆಗಳನ್ನು ವಶಕ್ಕೆ ಪಡೆದು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಭರಮಣ್ಣ ಶರಸೂರಿ, ಸುರೇಶ ಹಟ್ಟಿ, ಎಂ.ಎಸ್. ಮುಳಗುಂದ, ಇಲಿಯಾಸ್ ಮೀರಾನವರ, ಸಾಹೇಬಲಾಲ ಕಲೆಗಾರ, ಮಾಂತೇಶ ಶರಸೂರಿ, ಲೋಕೇಶ ಶರಸೂರಿ, ಮೈಲಾರಿ ಹೆಗ್ಗಣ್ಣವರ, ಎನ್.ಎಂ. ಆಡೂರ, ಎಂ.ಕೆ. ಕುಡಚಿ, ಮಹೇಶ ಸೂರಣಗಿ, ನಿಂಗಪ್ಪ ಕುರಟ್ಟಿ, ಇಸಾಕಬಾಷಾ ಹರಪನಹಳ್ಳಿ, ರಮೇಶ ಹಂಗನಕಟ್ಟಿ, ಬಸಣ್ಣ ಮೇಲೇರಿ, ಮೈನು ಮೊಮಿನ್, ಹಾಲಪ್ಪ ಬಂಡಾರಿ, ನಜೀರ ಬಾಗಲಕೋಟ, ಗೌಸ ಜಮಖಂಡಿ, ಬರಕತಲಿ ಮುಳಗುಂದ, ದುದ್ದು ರತನಖಾನ್, ಯಲ್ಲಪ್ಪ ಹಂಜಗಿ, ರಾಜು ಕೆರೆಕೊಪ್ಪ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

### ಮಣಿಪಾಲ್ ಆಸ್ಪತ್ರೆ ವೈದ್ಯರಿಂದ ಹೃದಯ ಆರೈಕೆ ಸಂವಾದದಲ್ಲಿ ಬಸವರಾಜ ಬಳ್ಳಾರಿ ಅಭಿಪ್ರಾಯ

## ಸರ್ಕಾರಿ ನೌಕರರ ಆರೋಗ್ಯವೇ ರಾಜ್ಯ ಸುಭಿಕ್ಷತೆಗೆ ಆಧಾರ



■ ವಿಜಯಸಾಕ್ಷಿ ಸುದ್ದಿ, ಗದಗ

ಮಣಿಪಾಲ್ ಆಸ್ಪತ್ರೆ ತಜ್ಞ ವೈದ್ಯರಿಂದ ಹೃದಯದ ಸಮಗ್ರ ಆರೈಕೆ ಮತ್ತು ಚಿಕಿತ್ಸೆ ಕುರಿತು ಸಂವಾದ ಕಾರ್ಯಕ್ರಮ ನಗರದಲ್ಲಿನ ಸರ್ಕಾರಿ ನೌಕರರ ಸಭಾಭವನದಲ್ಲಿ ಗುರುವಾರ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ಮಣಿಪಾಲ್ ಆಸ್ಪತ್ರೆ ಹೃದಯ ಚಿಕಿತ್ಸೆಯಲ್ಲಿ ಹೆಸರುವಾಸಿಯಾಗಿದ್ದು, ತಜ್ಞ ವೈದ್ಯರು ನೀಡಿದ ಮಾಹಿತಿ ನೌಕರರಿಗೆ ಉಪಯುಕ್ತವಾಗಿದೆ ಎಂದರು. ಸರ್ಕಾರಿ ನೌಕರರು ಆರೋಗ್ಯವಾಗಿದ್ದರೆ ಮಾತ್ರ ಉತ್ತಮ ಆಡಳಿತ ಸಾಧ್ಯವೆಂದು ಹೇಳಿದರು.

ನಿಯಮಿತ ವ್ಯಾಯಾಮ, ಸಮತೋಲಿತ ಆಹಾರ, ಧೂಮಪಾನ ತ್ಯಜಿಸುವುದು ಹಾಗೂ ಯೋಗ-ಧ್ಯಾನಗಳ ಮೂಲಕ ಒತ್ತಡ ನಿಯಂತ್ರಣ ಅಗತ್ಯ. ನಿಯಮಿತ ತಪಾಸಣೆಗಳಿಂದ ಹೃದಯ ರೋಗಗಳನ್ನು ತಡೆಗಟ್ಟಬಹುದು ಎಂದು ತಿಳಿಸಿದರು.

ಪ್ರಸ್ತಾವಿಕವಾಗಿ ಮಾತನಾಡಿದ ಸರಕಾರಿ ನೌಕರರ ಮಾಜಿ ಅಧ್ಯಕ್ಷ ರವಿ ಎಲ್. ಗುಂಜೀಕರ್, ಸಂಘವು ನೌಕರರ ಜೊತೆಗೆ ಅವರ ಕುಟುಂಬಗಳ ಆರೋಗ್ಯ ಮತ್ತು ಅಭಿವೃದ್ಧಿಗೂ ಕೆಲಸ ಮಾಡುತ್ತಿದೆ ಎಂದರು. ಎಲ್ಲರೂ ಈ ಕಾರ್ಯಕ್ರಮದ ಸದುಪಯೋಗ ಪಡೆಯಬೇಕು ಎಂದು ಕರೆ ನೀಡಿದರು.

> "ಹೃದಯ ರೋಗವು ಮಕ್ಕಳಲ್ಲೂ ಹಿರಿಯರಲ್ಲೂ ವಿಭಿನ್ನವಾಗಿ ಕಾಣಿಸುತ್ತದೆ. ಕೆಲ ಮಕ್ಕಳಿಗೆ ಜನ್ಮಜಾತ ಸಮಸ್ಯೆಗಳು ಇರುತ್ತವೆ. 6 ತಿಂಗಳೊಳಗೆ ಚಿಕಿತ್ಸೆ ನೀಡಿದರೆ ಉತ್ತಮ ಫಲಿತಾಂಶ ದೊರೆಯುತ್ತದೆ. ಲಕ್ಷಣಗಳು ಕಂಡುಬಂದ ತಕ್ಷಣವೇ ಪರೀಕ್ಷೆ ಅಗತ್ಯ."
>
> – ಡಾ. ಎಂ. ಜೈ ರಂಗನಾಥ್

### ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ-2026 ಪ್ರಗತಿ ಪರಿಶೀಲನೆ

## ಹೆಚ್‌ಐವಿ ತಪಾಸಣೆ, ಚಿಕಿತ್ಸೆ ವಿಸ್ತರಣೆಗೆ ಜಿಲ್ಲಾಧಿಕಾರಿ ಸೂಚನೆ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ವಿಭಾಗದ ವತಿಯಿಂದ ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ-2026ರ ಪ್ರಗತಿ ಪರಿಶೀಲನಾ ಸಭೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆಯಿತು.

ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಹೆಚ್‌ಐವಿ ಸೋಂಕಿನ ಕುರಿತು ಜನರಲ್ಲಿ ಜಾಗೃತಿ ಮೂಡಿಸಿ, ಕ್ಯೂಆರ್ ಕೋಡ್ ಮೂಲಕ ತಪಾಸಣೆ ಹೆಚ್ಚಿಸಬೇಕು ಎಂದು ಸೂಚಿಸಿದರು. ಸೋಂಕಿತರಿಗೆ ಮಾನಸಿಕ ಬೆಂಬಲ ನೀಡುವುದರ ಜೊತೆಗೆ ಶಾಲೆ-ಕಾಲೇಜುಗಳಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ಮಿಷನ್ ಏಡ್ಸ್ ಸುರಕ್ಷಾ ಅಭಿಯಾನದಡಿ ಗುರಿ ಸಾಧನೆಗೆ ಒತ್ತು ನೀಡಲಾಗಿದ್ದು, ಸೋಂಕಿತರು ತಮ್ಮ ಸ್ಥಿತಿ ತಿಳಿದುಕೊಳ್ಳುವುದು, ದೃಢಪಟ್ಟವರು ನಿರಂತರ ಏಆರ್‌ಟಿ ಚಿಕಿತ್ಸೆ ಪಡೆಯುವುದು ಹಾಗೂ ವೈರಲ್ ಲೋಡ್ ನಿಯಂತ್ರಣ ಸಾಧಿಸುವುದು ಮುಖ್ಯವಾಗಿದೆ ಎಂದು ತಿಳಿಸಿದರು.

ಹೆಚ್‌ಐವಿ, ಸಿಫಿಲಿಸ್ ಹಾಗೂ ಹೆಪಟೈಟಿಸ್ ತಾಯಿಯಿಂದ ಮಗುವಿಗೆ ಹರಡುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸಂಬಂಧ ತಪ್ಪು ಕಲ್ಪನೆಗಳನ್ನು ನಿವಾರಿಸಲು ಜಾಗೃತಿ ಕಾರ್ಯಕ್ರಮಗಳನ್ನು ಹೆಚ್ಚಿಸಲು ಸೂಚಿಸಿದರು.

▶▶ 4ನೇ ಪುಟಕ್ಕೆ

### ಸ್ಥಳೀಯ ವ್ಯಾಪಾರಿಗಳಿಗೆ ನಷ್ಟ, ಅನಧಿಕೃತ ವ್ಯಾಪಾರಕ್ಕೆ ಕಡಿವಾಣ ಹಾಕಲು ಜಿಲ್ಲಾಡಳಿತಕ್ಕೆ ಆಗ್ರಹ

## ಜಾತ್ರೆ ಅವಧಿ ಒಂದು ವಾರಕ್ಕೆ ಸೀಮಿತಗೊಳಿಸಿ



■ ವಿಜಯಸಾಕ್ಷಿ ಸುದ್ದಿ, ಗದಗ

ತೋಂಟದಾರ್ಯ ಮಠದ ಜಾತ್ರೆಯನ್ನು ದೀರ್ಘಾವಧಿಗೆ ನಡೆಸುವುದಕ್ಕೆ ವಿರೋಧ ವ್ಯಕ್ತಪಡಿಸಿರುವ ಹಿಂದೂ ವೀರಶೈವ ಲಿಂಗಾಯತ ಯುವ ವೇದಿಕೆಯ ರಾಜ್ಯ ಸಂಚಾಲಕ ರಾಜು ಖಾನಪ್ಪನವರ, ಜಾತ್ರೆಯನ್ನು ಒಂದು ವಾರಕ್ಕೆ ಮಾತ್ರ ಸೀಮಿತಗೊಳಿಸಬೇಕು ಎಂದು ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಪ್ರಿಲ್ 1ರಿಂದ 4ರವರೆಗೆ ಜಾತ್ರೆ ನಡೆಯಲಿದ್ದು, ನಗರಸಭೆ ಜಾಗದಲ್ಲಿ ಇದು ಸುಮಾರು 65 ದಿನಗಳವರೆಗೆ ಮುಂದುವರಿಯುತ್ತಿದೆ. ಇದರಿಂದ ಸ್ಥಳೀಯ ವ್ಯಾಪಾರಸ್ಥರಿಗೆ ತೊಂದರೆ ಆಗುತ್ತಿದ್ದು, ಹೊರ ರಾಜ್ಯಗಳಿಂದ ಬರುವ ವ್ಯಾಪಾರಿಗಳು ಬಟ್ಟೆ, ಶೂ, ಪಾತ್ರೆ ಸೇರಿದಂತೆ ವಿವಿಧ ವಸ್ತುಗಳನ್ನು ಮಾರಾಟ ಮಾಡಿ ಸ್ಥಳೀಯರ ಉದ್ಯೋಗಾವಕಾಶ ಕಸಿದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

> "ಹಿಂದೂ ದೇವರಿಗೆ ಅವಮಾನ ಮಾಡಿದರೆ ಸುಮ್ಮನೆ ಕೂರಲ್ಲ. ಜಾತ್ರಾ ವೇದಿಕೆಯಲ್ಲಿ ಈ ರೀತಿಯ ಘಟನೆಗಳು ಮರುಕಳಿಸಿದರೆ ತಕ್ಷಣವೇ ತಕ್ಕ ಕ್ರಮ ಕೈಗೊಳ್ಳಲಾಗುತ್ತದೆ. ಪೊಲೀಸ್ ಇಲಾಖೆ ಕೂಡ ಎಚ್ಚರಿಕೆಯಿಂದ ನಿಗಾ ವಹಿಸಬೇಕು."
>
> – **ರಾಜು ಖಾನಪ್ಪನವರ,** ರಾಜ್ಯ ಸಂಚಾಲಕ, ಹಿಂದೂ ವೀರಶೈವ ಲಿಂಗಾಯತ ಯುವ ವೇದಿಕೆ

2016ರಿಂದಲೇ ದೀರ್ಘಾವಧಿಯ ಜಾತ್ರೆಗೆ ವಿರೋಧ ವ್ಯಕ್ತಪಡಿಸುತ್ತಾ ಬಂದಿರುವುದಾಗಿ ತಿಳಿಸಿದ ಅವರು, ಸ್ಥಳೀಯ ವ್ಯಾಪಾರಿಗಳು ಬಾಡಿಗೆ ಅಂಗಡಿಗಳನ್ನು ಇಟ್ಟು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದರು.

ಮಠದ ವಿಚಾರದಲ್ಲಿ ಮಾತನಾಡಿದ ಅವರು, ಹಿಂದಿನ ಲಿಂ. ಸಿದ್ದಲಿಂಗ ಮಹಾಸ್ವಾಮಿಜಿಗಳ ತತ್ವಗಳಿಗೆ ವಿರುದ್ಧವಾಗಿ ಈಗಿನ ಡಾ. ಸಿದ್ದರಾಮ ಶ್ರೀಗಳು ನಡೆದುಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು. ಗದ್ದುಗೆಯ ನಿರ್ಮಾಣಕ್ಕೆ ಹೆಚ್ಚಿನ ಹಣ ವ್ಯಯಿಸಿರುವುದನ್ನೂ ಪ್ರಶ್ನಿಸಿದರು.

ವ್ಯಸನಮುಕ್ತ ಸಮಾಜದ ಹೆಸರಿನಲ್ಲಿ ನಡೆಯುತ್ತಿರುವ ಪಾದಯಾತ್ರೆಯನ್ನೂ ಟೀಕಿಸಿದ ಅವರು, ಮೊದಲು ತಮ್ಮ ಹಿಂಬಾಲಕರಲ್ಲಿ ಇರುವ ದುರ್ಬಲತೆಗಳನ್ನು ಸರಿಪಡಿಸಬೇಕು, ನಂತರ ಸಮಾಜ ಸುಧಾರಣೆಗೆ ಮುಂದಾಗಬೇಕು ಎಂದು ಹೇಳಿದರು.

ಜಾತ್ರಾ ಮಹೋತ್ಸವದ ಹಣಕಾಸು ವ್ಯವಹಾರಗಳಲ್ಲಿ ಪಾರದರ್ಶಕತೆ ಇರಬೇಕು ಎಂದು ಒತ್ತಾಯಿಸಿದ ಅವರು, ಅಧ್ಯಕ್ಷ ವಿನಾಯಕ ಮಾನ್ವಿ ಅವರು ಲೆಕ್ಕಪತ್ರಗಳನ್ನು ಸಾರ್ವಜನಿಕರ ಮುಂದಿಡಬೇಕು ಎಂದರು. ನಗರಸಭೆ ಜಾಗದಲ್ಲಿ ನಡೆಯುತ್ತಿರುವ ಅನಧಿಕೃತ ವ್ಯಾಪಾರವನ್ನು ಜಿಲ್ಲಾಧಿಕಾರಿಗಳು

▶▶ 2ನೇ ಪುಟಕ್ಕೆ

### ಒಗ್ಗಟ್ಟಿನಿಂದ ಆಚರಣೆ ಮಾಡಿದಾಗಲೇ ಜಾತ್ರೆ-ಉರುಸುಗಳಿಗೆ ವಿಶೇಷ ಮೆರಗು: ಸಂಗನಗೌಡ ಪಾಟೀಲ

## ಸರ್ವಧರ್ಮ ಸೌಹಾರ್ದಕ್ಕೆ ಉರುಸು ವೇದಿಕೆ!



■ ವಿಜಯಸಾಕ್ಷಿ ಸುದ್ದಿ, ರೋಣ

ಯಾವುದೇ ಧರ್ಮಗಳ ಜಾತ್ರೆ ಹಾಗೂ ಉರುಸುಗಳನ್ನು ಎಲ್ಲರೂ ಒಂದಾಗಿ ಸೇರಿ ಆಚರಿಸಿದಾಗ ಮಾತ್ರ ಅವುಗಳಿಗೆ ವಿಶಿಷ್ಟ ಮೆರಗು ಸಿಗುತ್ತದೆ ಎಂದು ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ ಹೇಳಿದರು. ಪಟ್ಟಣದ ದರ್ಗಾ ಆವರಣದಲ್ಲಿ ನಡೆದ 20ನೇ ವರ್ಷದ ಸರ್ವಧರ್ಮ ಸಮ್ಮೇಳನ ಮತ್ತು ಉರುಸು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ದೇಶದಲ್ಲಿ ಪರಸ್ಪರ ಸೌಹಾರ್ದತೆಯಿಂದ ಹಬ್ಬ-ಹರಿದಿನಗಳನ್ನು ಆಚರಿಸುವ ಪರಂಪರೆ ಪ್ರಾಚೀನ ಕಾಲದಿಂದಲೂ ಇದೆ. ಇಂದಿಗೂ ದರ್ಗಾ ಮತ್ತು ಮಂದಿರಗಳಿಗೆ ಎಲ್ಲಾ ಧರ್ಮದವರು ಭೇಟಿ ನೀಡುತ್ತಿರುವುದು ಸಮಾಜದ ಏಕತೆ ಮತ್ತು ಸಹಬಾಳ್ವೆಯ ಸಂಕೇತವಾಗಿದೆ. ರೋಣ ಪಟ್ಟಣದ ದರ್ಗಾ ಅಪಾರ ಭಕ್ತ ಸಮುದಾಯವನ್ನು ಹೊಂದಿದ್ದು, ಕ್ಷೇತ್ರದ ಮಹತ್ವವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ಹಜರತ ಸುಲೇಮಾನ್ ಸೈಯದ ಶಾ ಸುಲೇಮಾನ್ ಶಾವಲಿ ಅಜ್ಜನವರು ಮಾತನಾಡಿ, ಹಿಂದೂ-ಮುಸ್ಲಿಂ ಭಕ್ತರು ಇತಿಹಾಸದಿಂದಲೇ ಭೇದಭಾವವಿಲ್ಲದೆ ಭಕ್ತಿಭಾವದಿಂದ ನಡೆದುಕೊಂಡು ಬಂದಿದ್ದಾರೆ. ಉರುಸು ಸಂದರ್ಭದಲ್ಲಿ ವಿವಿಧ ಮಠಗಳ ಪೂಜ್ಯರು ಆಗಮಿಸಿ ಭಕ್ತರಿಗೆ ಆಶೀರ್ವಚನ ನೀಡುವುದು ಸೌಹಾರ್ದತೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಶರಣರು ಮತ್ತು ಸೂಫಿ ಸಂತರು ತೋರಿದ ಮಾರ್ಗದಲ್ಲಿ ನಾವು ಸಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಗುರುಪಾದ ಶ್ರೀಗಳು, ಶರಣಬಸ ಶ್ರೀಗಳು, ಅಕ್ಷಯ ಪಾಟೀಲ, ಶಬ್ಬೀರ ಅಹ್ಮದ ಖಾಜಿ, ಶಫೀಕ್ ಮೂಗನೂರು, ಮಲೀಕ ಯಲಿಗಾರ, ಅಸ್ಲಂ ಕೊಪ್ಪಳ, ಭರಮಗೌಡ ಲಿಂಗನಗೌಡ್ರ, ನಿಂಗಪ್ಪ ನವಲಗುಂದ, ಮಲ್ಲಯ್ಯ ಮಹಾಪುರುಷಮಠ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

## ಇಂದು ವಿಶ್ವ ರಂಗಭೂಮಿ ದಿನಾಚರಣೆ: ರಂಗ ಗೌರವ



■ ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಹಾಗೂ ಚಿನ್ಮಯ ಸಾಂಸ್ಕೃತಿಕ ಅಕಾಡೆಮಿ, ಗದಗ ಇವರ ಸಹಯೋಗದಲ್ಲಿ ವಿಶ್ವ ರಂಗಭೂಮಿ ದಿನಾಚರಣೆಯನ್ನು ದಿ.27ರಂದು ಸಂಜೆ 6 ಗಂಟೆಗೆ ಬೆಟಗೇರಿಯ ಹೊಸಪೇಟೆ ಚೌಕ್ ಸಮೀಪದ ಕಾಳಿಕಾ ದೇವಿ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಹಿರಿಯ ರಂಗ ಕಲಾವಿದ ಬಸವರಾಜ ಶಿ. ಅಡವಳ್ಳಿ ಅವರಿಗೆ ರಂಗ ಗೌರವ ಪ್ರದಾನ ಮಾಡಲಾಗುತ್ತದೆ.

ಇದೇ ಸಂದರ್ಭದಲ್ಲಿ ರಂಗಗೀತ ಗಾಯನ, "ಸಶಕ್ತ ಸಮಾಜ ಕಟ್ಟುವಲ್ಲಿ ರಂಗಭೂಮಿಯ ಪಾತ್ರ" ಕುರಿತು ಉಪನ್ಯಾಸ ಹಾಗೂ ಚಿನ್ಮಯ ಕಲಾಶ್ರೀ ಪ್ರಶಸ್ತಿ ಪ್ರದಾನ ನಡೆಯಲಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಬಸವರಾಜ ಬಳ್ಳಾರಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಶ್ರೀಧರ ಕೊಣ್ಣೂರ, ಶಂಕ್ರಣ್ಣ ಸಂಕಣ್ಣವರ, ರಾಜಗೋಪಾಲ ಕಡ್ಲಿಕೊಪ್ಪ, ವಿಶ್ವನಾಥ ಯ. ಕಮ್ಮಾರ, ಮುರಲೀಧರ ಸಂಕನೂರ ಹಾಗೂ ವಿಜಯಕುಮಾರ ಜಿತೂರಿ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ಜಾತ್ರೆ ಅವಧಿ ಒಂದು ವಾರಕ್ಕೆ ಸೀಮಿತಗೊಳಿಸಿ

▶▶ ಮೊದಲನೇ ಪುಟದಿಂದ

ಜಿಲ್ಲಾಧಿಕಾರಿಗಳು ತಡೆಹಿಡಿಯಬೇಕು, ಇಲ್ಲವಾದರೆ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಹೇಶ್ ರೋಖಡೆ, ಶಿವಯೋಗಿ ಹಿರೇಮಠ, ಪಿ.ಎಸ್. ಕಾಳೆ, ಭರತ್ ಲದ್ದಿ, ವೆಂಕಟೇಶ್ ದೊಡ್ಡಮನಿ, ಸತೀಶ್ ಕುಂಬಾರ, ಶಿವು ಲದ್ದಿ, ವಿಶ್ವನಾಥ ಶಿರಿ ಉಪಸ್ಥಿತರಿದ್ದರು.

### ಬಾಲ್ಯದಿಂದಲೇ ಕಲೆಯ ಪ್ರೇಮ ಅಳವಡಿಸಿಕೊಂಡ ಪಾಂಡಪ್ಪ ಲಮಾಣಿ

## ಸಾಧನೆಯ ಶಿಖರವೇರಿದ ಬಂಜಾರ ಕಲಾವಿದ!

ಗದಗ ಜಿಲ್ಲೆಯ ನಾಗಾವಿ ತಾಂಡಾದ ಶ್ರೀ ದೇವಲಪ್ಪ-ಶ್ರೀಮತಿ ಗಂಗವ್ವ ದಂಪತಿಗಳ ಪುತ್ರರಾಗಿ 1938ರಲ್ಲಿ ಜನಿಸಿದ ಪಾಂಡಪ್ಪ ಲಮಾಣಿ, ಬಾಲ್ಯದಿಂದಲೇ ಅಜ್ಜ ಠಾಕರಪ್ಪ ಮಂಚ್ಯಪ್ಪ ನಾಯಕರ ಮೇಲಿಂದ ಬಂಜಾರ ಲಾವಣಿ ಪದಗಳು, ಧಾರ್ಮಿಕ ನೀತಿ ಕಥೆಗಳು ಕಲಿತರು. 14 ವರ್ಷದಿಂದಲೇ ಜಾನಪದ ಕಲೆಯನ್ನು ಅಭ್ಯಾಸ ಮಾಡಿ ಸಮಾಜದ ಸುಧಾರಣೆಗೆ ಶ್ರಮಿಸಿದರು.

**ಬಂಜಾರ ಸಂಸ್ಕೃತಿ ಮತ್ತು ಜಾನಪದ ಕಲೆ:** ಅವರು ಹಬ್ಬ, ಉತ್ಸವ, ಧಾರ್ಮಿಕ ಪೂಜೆ, ಮದುವೆ, ಜನನ-ಮರಣದಲ್ಲಿ ವಿಭಿನ್ನ ಹಾಡುಗಳನ್ನು ಹಾಡಿ ಕಥೆಗಳ ಮೂಲಕ ಬಂಜಾರ ಪರಂಪರೆ ತಿಳಿಸಿದರು. ವಾಜಾ, ಗಂಗಾಳ, ನಗಾರಿ ಭಜನೆಗಳು, ಬಂಜಾರ ಕಹಾವತ್, ಹೋಳಿ, ತೀಜ್ ಹಬ್ಬಗಳ ಹಾಡುಗಳು, ಜೀವನದ ಸೌಖ್ಯ-ದುಃಖ, ಧಾರ್ಮಿಕ ಮತ್ತು ಐತಿಹಾಸಿಕ ಕಥೆಗಳ ವೈಭವವನ್ನು ಹೊತ್ತುಕೊಂಡಿವೆ.

**ಸಮಾಜ ಸೇವೆ ಮತ್ತು ಜೀವನ ಸಂಕಲ್ಪ:** ಕಡುಬಡತನದ ನಡುವೆಯೂ ಪತ್ನಿ ಸೀತವ್ವ ಲಮಾಣಿ ಜೊತೆ ತಮ್ಮ



ಮಕ್ಕಳನ್ನು ವಿದ್ಯಾವಂತರು ಮಾಡಿದ ಅವರು, ತಮ್ಮ ಕಲೆಯ ಮೂಲಕ ಸಮಾಜಕ್ಕೆ ಸುಖ-ಸಂತ್ವನ ನೀಡಿದರು.


ಅವರು ಗದಗ ಜಿಲ್ಲಾ ಬಂಜಾರ ಸಮುದಾಯಕ್ಕೆ ಹೆಸರಾಗಿದ್ದು, ಜನರನ್ನು ಸುಸಂಸ್ಕೃತ, ಸಾಂಪ್ರದಾಯಿಕ ಮಾರ್ಗದತ್ತ ಪ್ರೇರೇಪಿಸಿದರು.

**ರಾಜ್ಯ ಮಟ್ಟದ ಪ್ರಶಸ್ತಿ ಮತ್ತು ಗೌರವ:** ಪಾಂಡಪ್ಪ ಲಮಾಣಿ ಅವರ ಸೇವೆಗೆ ರಾಜ್ಯ ಮಟ್ಟದ ಶ್ರೀ ಸಂತ ಸೇವಾಲಾಲ್ ಪ್ರಶಸ್ತಿ ಲಭಿಸಿದೆ. 27 ರಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಪ್ರಶಸ್ತಿಯನ್ನು ನೀಡಲಿದ್ದಾರೆ. 88 ವರ್ಷ ವಯಸ್ಸಿನಲ್ಲಿಯೂ ಬಂಜಾರ ಕಲೆಯನ್ನು ಉತ್ತಂಗಕ್ಕೆ ತಂದು ಯುವ ಗಾಯಕರಿಗೆ ಮಾದರಿ ಆಗಿ, ಸಮುದಾಯಕ್ಕೆ ಘನತೆ ಮತ್ತು ಗೌರವ ನೀಡುತ್ತಿದ್ದಾರೆ.



– ಪಾಂಡು ಆಲಪ್ಪ ಚವ್ಹಾಣ, ಉಪನ್ಯಾಸಕರು, ಬೆಳಧಡಿ, ಗದಗ

## ಅಕ್ರಮ- ಅಕ್ರಮ ಯೋಜನೆ ಹಣವನ್ನು ಸರ್ಕಾರ ಬರಿಸಲಿ



■ ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಕರ್ನಾಟಕದಲ್ಲಿ ಬೆಂಬಲ ಬೆಲೆ ಇಲ್ಲದೆ ರೈತರು ಸಂಕಷ್ಟದಲ್ಲಿ ಇದ್ದು, ಹಗರಿಬೊಮ್ಮನಹಳ್ಳಿ ರೈತ ಸಂಘವು ಪಂಪ್ ಸೆಟ್ ಅಕ್ರಮ-ಸಕ್ರಮ ಯೋಜನೆಗೆ ಸರ್ಕಾರವೇ ತಕ್ಷಣ ಹಣ ಬಿಡುಗಡೆ ಮಾಡಬೇಕು ಎಂದು ಹಗರಿಬೊಮ್ಮನಹಳ್ಳಿ ತಾಲೂಕ ರೈತ ಸಂಘದ ಅಧ್ಯಕ್ಷ ಬಸವನಗೌಡ ತಿಳಿಸಿದ್ದಾರೆ.

"ಸರ್ಕಾರ ಮನವಿಗೆ ಸ್ಪಂದಿಸದಿದ್ದರೆ, ಮುಂದಿನ ದಿನಗಳಲ್ಲಿ ಉಗ್ರ ಹೋರಾಟಕ್ಕೆ ನಾವು ಸಿದ್ಧರಾಗಿದ್ದೇವೆ."

ಈ ಸಂಬಂಧ, ರೈತ ಸಂಘದ ನಿಯೋಗ ತಹಶೀಲ್ದಾರ್ ಮುಖಾಂತರ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಮನವಿಯನ್ನು ಉಪ ತಹಶೀಲ್ದಾರ ಶ್ವೇತಾ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ರಾಜ್ಯ ಕಾರ್ಯದರ್ಶಿ ಗೋಣಿಬಸಪ್ಪ, ಕಲೀಮ್ ಭಾಷಾ, ರಾಮೇಶ್ವರ ಬಂಡಿ ಶಂಕ್ರಪ್ಪ, ಎ ಎಂ ಬಸಯ್ಯ, ಬಿ ಉಮೇಶ್, ಪೂಜಾರ್ ಮೂರ್ತಿ, ದಾಸರ ಶಂಕ್ರಪ್ಪ, ಅಶೋಕ್, ಹಾಗೂ ಇತರ ಸಂಘದ ಮುಖಂಡರು ಹಾಜರಿದ್ದರು.

## ಎಸ್‌ಸಿ-ಎಸ್‌ಟಿ ಆಯೋಗಕ್ಕೆ ಗೀತಾ ಮಲ್ಲಿಕಾರ್ಜುನ ಥಾಂವಶಿ ನೇಮಕ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಹೆಚ್ಚುವರಿ ಸದಸ್ಯರಾಗಿ ಧಾರವಾಡ ಮೂಲದ ಗೀತಾ ಮಲ್ಲಿಕಾರ್ಜುನ ಥಾಂವಶಿ ಅವರನ್ನು ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡಿದೆ.



ಈ ಸಂಬಂಧ ಸರ್ಕಾರ ಅಧಿಕೃತ ಆದೇಶ ಹೊರಡಿಸಿದ್ದು, ಗೀತಾ ಮಲ್ಲಿಕಾರ್ಜುನ ಥಾಂವಶಿ ಅವರು ಧಾರವಾಡದ ಸಪ್ತಾಪೂರ, 12ನೇ ಕ್ರಾಸ್, ಜಯನಗರ ನಿವಾಸಿಯಾಗಿದ್ದು, ವೃತ್ತಿಯಿಂದ ವಕೀಲರಾಗಿದ್ದಾರೆ. ಅವರನ್ನು ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಸರ್ಕಾರದ ಆದೇಶದವರೆಗೆ ಇವುಗಳಲ್ಲಿ ಯಾವುದಾದರೂ ಮೊದಲು ಜಾರಿಗೆ ಬರುವವರೆಗೆ ಆಯೋಗದ ಸದಸ್ಯರಾಗಿ ನೇಮಕ ಮಾಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಅಧೀನ ಕಾರ್ಯದರ್ಶಿಗಳು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

### ಶ್ರೀ ರಾಮನವಮಿ ಸಂಭ್ರಮ

## ಆದರ್ಶ ಜೀವನಕ್ಕಾಗಿ ರಾಮನ ಗುಣಗಳು ಮಾದರಿ!

**ಶ್ರೀ ರಾಮನವಮಿ ಸಂಭ್ರಮಾಚರಣೆ!**

ಚೈತ್ರ ಮಾಸದ ಶುದ್ಧ ನವಮಿಯಂದು ಶ್ರೀ ರಾಮನವಮಿ ಹಬ್ಬವನ್ನು ಎಲ್ಲೆಡೆ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ರಾಮನವಮಿ ನಿಮಿತ್ತ ವಿವಿಧೆಡೆ ದೇವಾಲಯಗಳಲ್ಲಿ ಪೂಜೆ-ಪುನಸ್ಕಾರಗಳು, ಭಜನೆಗಳು ಜರುಗುತ್ತವೆ. ಜನರು ಶ್ರದ್ಧಾ-ಭಕ್ತಿಯಿಂದ ಭಗವಾನ್ ಶ್ರೀ ರಾಮನನ್ನು ಭಜಿಸಿ ಪುನೀತರಾಗುತ್ತಾರೆ.


ಸನತ್ ಕುಮಾರರು ಭಗವಂತನ ಗುಣಗಳ ಬಗ್ಗೆ ನಾರದರಲ್ಲಿ ಕೇಳಿದಾಗ, ನಾರದರು ರಾಮಾಯಣವನ್ನು ಶ್ರವಣ ಮಾಡಬೇಕೆಂದರು. ರಾಮಾಯಣದಲ್ಲಿನ ಶ್ರೀ ರಾಮನ ವ್ಯಕ್ತಿತ್ವ ಅನುಪಮವಾಗಿದೆ. ಚಂದ್ರನಂತೆ ಹೊಳೆಯುವ ಮುಖ, ಅಜಾನುಬಾಹು, ಮಹಾಪರಾಕ್ರಮಿ ಹಾಗೂ ಮಹಾಸಾರ್ಥ್ಯವುಳ್ಳವನಾಗಿದ್ದರೂ ಸಹ ತನ್ನ ಸಾರ್ಥ್ಯದ ಬಗ್ಗೆ ಹೇಳಿಕೊಳ್ಳುತ್ತಿರಲಿಲ್ಲ. ಇನ್ನೊಬ್ಬರ ಸಾರ್ಥ್ಯವನ್ನು ನೋಡಿ ಅಸೂಯೆ ಪಡುವವನಲ್ಲ. "ಭೂಮೌ ಅನುಪಮ ಸೂನು:" ಎಂದರೆ ದಶರಥ ಮಹಾರಾಜನಿಗೆ ರಾಮನು ಅಪರೂಪದ ಪುತ್ರ.

ಮನುಷ್ಯರಾಗಿ ನಾವು ಹೇಗೆ ಬದುಕಬೇಕು ಎಂಬುದನ್ನು ರಾಮಚಂದ್ರನಿಂದ ಕಲಿಯಬಹುದು. "ಮೃದು ಪರ್ಯಂವಚ ಭಾಷ್ಯತೆ" – ಮೃದುವಾಗಿ ಮಾತನಾಡುವವನು, ಪ್ರಶಾಂತ ಮನಸ್ಸಿನವನಾಗಿದ್ದನು. "ನ ಸ್ಮರತಿ ಅಪಕಾರಾಣಾಂ" – ಯಾರಾದರೂ ತನಗೆ ಅಪಕಾರ ಮಾಡಿದರೂ ಅದನ್ನು ನೆನಪಿಡುತ್ತಿರಲಿಲ್ಲ. ಬದಲಾಗಿ ಸಣ್ಣ ಉಪಕಾರ ಮಾಡಿದರೂ ಅದನ್ನು ಸದಾ ಸ್ಮರಿಸುತ್ತಿದ್ದನು. "ಯಥಾ ಉಪಾಸತೇ ತದೇವ ಭವತಿ" – ನಾವು ದೇವರನ್ನು ಹೇಗೆ ಆರಾಧಿಸುತ್ತೇವೋ, ಅದೇ ರೀತಿ ಅವರ ಗುಣಗಳನ್ನು ಅಳವಡಿಸಿಕೊಳ್ಳುತ್ತೇವೆ.

ಶ್ರೀ ರಾಮನು ಎಲ್ಲ ಪ್ರಜೆಗಳಿಗೂ ಪ್ರೀತಿಪಾತ್ರನಾಗಿದ್ದು, ಅಸ್ತ್ರ-ಶಸ್ತ್ರಗಳಲ್ಲಿ ಪರಿಣತನಾಗಿದ್ದನು. "ಪ್ರಿಯಭಾಷಿ" – ಪ್ರೀತಿಯಿಂದ ಮಾತನಾಡುವವನು. ವ್ಯರ್ಥ ಮಾತುಗಳನ್ನು ಆಡುತ್ತಿರಲಿಲ್ಲ. ಮಾತನಾಡಿದರೆ ಅದು ಯುಕ್ತವಾಗಿರುತ್ತಿತ್ತು ಎಂದು ನಾರದರು ವರ್ಣಿಸುತ್ತಾರೆ.

ಶ್ರೀ ರಾಮನು ಪಿತೃವಾಕ್ಯ ಪಾಲಿಸುವ ಮಗನಾಗಿ, ಆದರ್ಶ ಪತಿಯಾಗಿ, ಆದರ್ಶ ಅಣ್ಣನಾಗಿ, ಆದರ್ಶ ರಾಜನಾಗಿ ಮೌಲ್ಯಯುತ ವ್ಯಕ್ತಿಯಾಗಿದ್ದನು. ವೇದಾಂತಗಳು ಬೋಧಿಸುವಂತೆ ಜ್ಞಾನಮಾರ್ಗಕ್ಕೆ ವೈರಾಗ್ಯವೇ ಪ್ರಮುಖ ಅರ್ಹತೆ. ಜ್ಞಾನಮಾರ್ಗವನ್ನು ಪ್ರೀತಿಸುವ ಮಹಾತ್ಮರೆಲ್ಲರೂ ಶ್ರೀ ರಾಮನತ್ತ ಆಕರ್ಷಿತರಾಗುತ್ತಾರೆ.

ಭಗವಂತನು ತ್ರೇತಾಯುಗದಲ್ಲಿ ರಾಮನಾಗಿ ಅವತರಿಸಿ, ಮೋಕ್ಷ ಸಾಧನೆಗೆ ಮಾತು-ಮನಸ್ಸು-ದೇಹ ಹೇಗೆ ಚಟುವಟಿಕೆಯಿಂದಿರಬೇಕು ಎಂದು ತೋರಿಸಿದ್ದಾನೆ. ದ್ವಾಪರಯುಗದಲ್ಲಿ ಭಗವದ್ಗೀತೆಯ ಮೂಲಕ ಜೀವನ ಮಾರ್ಗವನ್ನು ಬೋಧಿಸಿದ್ದಾನೆ. ಸದಾಚಾರಿಗಳಲ್ಲಿ, ಜ್ಞಾನಿಗಳಲ್ಲಿ ರಾಮನ



ಸನ್ನಿಧಾನವಿರುತ್ತದೆ ಎಂದು ನಾರದರು ಹೇಳುತ್ತಾರೆ.

ಭಗವಾನ್ ಶ್ರೀ ರಾಮನು ಅಯೋಧ್ಯೆಯ ರಾಜ ದಶರಥ ಮತ್ತು ರಾಣಿ ಕೌಸಲ್ಯೆಯ ಪುತ್ರ. ಅವರನ್ನು "ಮರ್ಯಾದಾ ಪುರುಷೋತ್ತಮ" ಎಂದು ಕರೆಯುತ್ತಾರೆ. ರಾಮನ ಕೆಲವು ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ, ನಮ್ಮ ಜೀವನವೂ ಯಶಸ್ವಿಯಾಗುತ್ತದೆ.

**ತಾಳ್ಮೆ:** ಇಂದಿನ ಜನರಲ್ಲಿ ತಾಳ್ಮೆ ಮತ್ತು ಸಹನೆಯ ಕೊರತೆ ಕಾಣುತ್ತದೆ. ಎಲ್ಲವನ್ನೂ ತ್ವರಿತವಾಗಿ ಪಡೆಯಲು ಬಯಸುತ್ತಾರೆ. ಜೀವನದಲ್ಲಿ ಯಶಸ್ಸನ್ನು ಸಾಧಿಸಲು ಶ್ರೀ ರಾಮನಂತೆ ತಾಳ್ಮೆ ಅಗತ್ಯ. 14 ವರ್ಷಗಳ ವನವಾಸವನ್ನು ಶಾಂತವಾಗಿ ಸಹಿಸಿದ ರಾಮನ ತಾಳ್ಮೆ ಪ್ರತಿಯೊಬ್ಬರಿಗೂ ಮಾದರಿ.

ನಾಯಕತ್ವ: ನಾಯಕತ್ವದ ಗುಣ ಪ್ರತಿಯೊಬ್ಬನಲ್ಲೂ ಇರಬೇಕು. ಎಲ್ಲರೊಂದಿಗೆ ಹೊಂದಿಕೊಂಡು ಸಾಗುವವನು ಯಶಸ್ವಿಯಾಗುತ್ತಾನೆ. ರಾಮನ ನಾಯಕತ್ವದಿಂದಲೇ ಸಮುದ್ರದ ಮೇಲೆ ಸೇತುವೆ ನಿರ್ಮಾಣ ಸಾಧ್ಯವಾಯಿತು.

**ಆದರ್ಶ ಸಹೋದರ:** ರಾಮ-ಲಕ್ಷ್ಮಣರ ಬಂಧವು ಅತ್ಯುತ್ತಮ ಉದಾಹರಣೆ. ಭರತ ಮತ್ತು ಶತ್ರುಘ್ನರೊಂದಿಗೆ ರಾಮನು ನಿಕಟ ಸಂಬಂಧ ಹೊಂದಿದ್ದನು. ಅವರ ಪ್ರೀತಿ, ತ್ಯಾಗ ಮತ್ತು ಸರ್ಪಣೆ ಅವರನ್ನು ಆದರ್ಶ ಸಹೋದರರನ್ನಾಗಿಸಿದೆ.

ಆದರ್ಶ ಪುತ್ರ: ರಾಮನು ತನ್ನ ತಂದೆ ದಶರಥನಿಗೆ ಆದರ್ಶ ಪುತ್ರ. ತಂದೆಯ ಆದೇಶವನ್ನು ಪ್ರಶ್ನಿಸದೇ ಪಾಲಿಸಿದನು. ಇದು ಪೋಷಕರಿಗೆ ಗೌರವ ನೀಡಬೇಕೆಂಬ ಸಂದೇಶವನ್ನು ಕೊಡುತ್ತದೆ.

**ಆದರ್ಶ ಪತಿ:** ರಾಮನು ಸೀತೆಗೆ ಆದರ್ಶ ಪತಿ. ಸೀತೆಯನ್ನು ಸದಾ ಗೌರವಿಸಿದನು. ರಾವಣನು ಸೀತೆಯನ್ನು ಅಪಹರಿಸಿದಾಗ ಅವಳನ್ನು ಮರಳಿ ಕರೆತರಲು ಹೋರಾಡಿದನು. ಇದರಿಂದ ಸಂಗಾತಿಯ ಮೇಲಿನ ಗೌರವ ಮತ್ತು ರಕ್ಷಣೆ ಮಹತ್ವವು ತಿಳಿಯುತ್ತದೆ.

**ಸತ್ಯನಿಷ್ಠೆ:** ರಾಮನು ಸದಾ ಸತ್ಯವಂತ. ಅವನ ಜೀವನದ ಪ್ರತಿಯೊಂದು ನಡೆ ಸತ್ಯದ ಪ್ರತೀಕ. ನಾವು ಯಾವಾಗಲೂ ಸತ್ಯವನ್ನು ಪಾಲಿಸಬೇಕು.

**ಕರ್ತವ್ಯನಿಷ್ಠೆ:** ತನ್ನ ಕರ್ತವ್ಯಗಳನ್ನು ರಾಮನು ಅತ್ಯಂತ ನಿಷ್ಠೆಯಿಂದ ನೆರವೇರಿಸಿದನು. ಕಷ್ಟಗಳ ನಡುವೆ ಕೂಡ ತನ್ನ ಹೊಣೆಗಾರಿಕೆಯನ್ನು ತಪ್ಪಿಸಲಿಲ್ಲ.

**ಧರ್ಮನಿಷ್ಠೆ:** ಯಾವುದೇ ಸಂದರ್ಭದಲ್ಲೂ ಧರ್ಮವನ್ನು ಅನುಸರಿಸಿದನು. ಅದಕ್ಕಾಗಿ ರಾಮನನ್ನು "ಮರ್ಯಾದಾ ಪುರುಷೋತ್ತಮ" ಎಂದು ಕರೆಯುತ್ತಾರೆ. ಕಷ್ಟಕಾಲದಲ್ಲೂ ಧರ್ಮ ಮಾರ್ಗವನ್ನು ಅನುಸರಿಸಬೇಕು ಎಂಬ ಪಾಠವನ್ನು ನೀಡುತ್ತದೆ.

**ರಾಮರಾಜ್ಯ:** ರಾಮನ ಆಡಳಿತದಲ್ಲಿ ಪ್ರಜೆಗಳಿಗೆ ಭಯ, ಅನ್ಯಾಯ, ದುಃಖ ಯಾವುದೂ ಇರಲಿಲ್ಲ. ಶಾಂತಿ, ಧರ್ಮ ಮತ್ತು ಸಮೃದ್ಧಿಯಿಂದ ಕೂಡಿದ ಆದರ್ಶ ರಾಜ್ಯವಾಗಿತ್ತು.

ಧರ್ಮಕ್ಕಾಗಿ ಹೋರಾಡಿ ದುಷ್ಟರನ್ನು ಸಂಹರಿಸಿ, ಶಿಷ್ಟರನ್ನು ರಕ್ಷಿಸಿದ ಪರಮಾತ್ಮ ಶ್ರೀ ರಾಮನನ್ನು ಆರಾಧಿಸಿ, ನಾಮಸ್ಮರಣೆ ಮಾಡುವುದು ನಮ್ಮ ಕರ್ತವ್ಯ. ಅವರ ಪೂಜೆ ಮತ್ತು ನಾಮಸ್ಮರಣೆಯಿಂದ ಪುನೀತರಾಗೋಣ.

**ಜೈ ಶ್ರೀ ರಾಮ್**

**– ಶ್ರೀಮತಿ ಅಂಜನಾ ರಾಘವೇಂದ್ರ ಕುಬೇರ,** ಗದಗ

## ಲಕ್ಷ್ಮೇಶ್ವರದಲ್ಲಿ ಅಂತಾರಾಷ್ಟ್ರೀಯ ತಾಂತ್ರಿಕ ಸಮ್ಮೇಳನಕ್ಕೆ ಚಾಲನೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಶ್ರೀಮತಿ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ ಅಗಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಲಾದ ಮೂರನೇ ಅಂತಾರಾಷ್ಟ್ರೀಯ ತಾಂತ್ರಿಕ ಸಮ್ಮೇಳನವನ್ನು ಬೆಂಗಳೂರಿನ ನ್ಯಾನೋ ಮತ್ತು ಸಾಫ್ಟ್ ಮ್ಯಾಟರ್ ಸೈನ್ಸ್‌ನ ಹಿರಿಯ ವಿಜ್ಞಾನಿ ಡಾ. ಸಿ.ವಿ. ಏಳಮಗ್ಗ ಅವರು ಗುರುವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ನಮ್ಮ ಸುತ್ತಮುತ್ತಲಿನ ಸಮಸ್ಯೆಗಳು ಮತ್ತು ಅವಶ್ಯಕತೆಗಳನ್ನು ಗುರುತಿಸಿ ಸಂಶೋಧನೆ ಮಾಡುವ ಮೂಲಕ ಪರಿಹಾರ ಕಂಡುಕೊಳ್ಳಬಹುದು ಎಂದು ಹೇಳಿದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಿಂದ ಹೊಸ ಅನ್ವೇಷಣೆ ಮತ್ತು ಸಂಶೋಧನೆ ಸಾಧ್ಯವಾಗಬೇಕಾದರೆ ಶಿಕ್ಷಕರ ಮಾರ್ಗದರ್ಶನ, ಸಹಕಾರ ಹಾಗೂ ಪ್ರೋತ್ಸಾಹ ಅತ್ಯಗತ್ಯವೆಂದು ಅಭಿಪ್ರಾಯಪಟ್ಟರು.

ನಾವು ಸೇವಿಸುವ ಆಹಾರದಿಂದ ಉಂಟಾಗುವ ದುಷ್ಪರಿಣಾಮಗಳನ್ನು ಸಂಶೋಧನೆಯ ಮೂಲಕ ಪತ್ತೆಹಚ್ಚಿ ಜನರಿಗೆ ಅರಿವು ಮೂಡಿಸುವುದು ಅಗತ್ಯ ಎಂದು ಅವರು ತಿಳಿಸಿದರು.

ಸಮ್ಮೇಳನದಲ್ಲಿ ಥೈಲ್ಯಾಂಡ್ ದೇಶದ ಅಂತರಾಷ್ಟ್ರೀಯ ಭಾಷಣಕಾರರಾದ ಡಾ. ನರಮೋಲ್ ಚುಮೊಂಗ್ ಅವರು ವರ್ಚುವಲ್ ಮೂಲಕ ಭಾಗವಹಿಸಿ ಸಂಶೋಧನೆ ಮತ್ತು ಕೃತಕ ಬುದ್ಧಿಮತ್ತೆ (ಒಡಿಣಬಿಫಿಛಿಚಿಟ ಖಟಿಣಜಟಟಜಿಗಜಟಿಛಿಜ) ಮಹತ್ವದ ಬಗ್ಗೆ ಉಪನ್ಯಾಸ ನೀಡಿದರು.

ಈ ಸಮ್ಮೇಳನದಲ್ಲಿ ದೇಶದ ವಿವಿಧ ಭಾಗಗಳಿಂದ 98ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ. ಪರಶುರಾಮ ಬಾರಕಿ, ಪ್ರೊ. ವಿಕ್ರಂ ಶಿರೋಳ, ಡಾ. ಸುಭಾಸ್ ಮೇಟಿ, ಸಂಯೋಜಕರಾದ ಡಾ. ಅರುಣ ಜೋಶಿ, ಡಾ. ಶ್ರೀನಿವಾಸ ಸೇರಿದಂತೆ ಮಹಾವಿದ್ಯಾಲಯದ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಡಾ. ಆರ್.ಎಂ. ಪಾಟೀಲ್ ಅವರು ಸ್ವಾಗತಿಸಿದರು.

### ಲಕ್ಷ್ಮೇಶ್ವರದಲ್ಲಿ ವೀರಪುಲಕೇಶಿ ಕೋ-ಆಪರೇಟಿವ್ ಬ್ಯಾಂಕ್ 14ನೇ ಶಾಖೆ ಉದ್ಘಾಟನೆ

## ಸಹಕಾರ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆ, ಪ್ರಾಮಾಣಿಕತೆ ಅತ್ಯವಶ್ಯ!



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಬಜಾರ ರಸ್ತೆಯ ಎಂ.ಬಿ. ಹತ್ತಿಕಾಳ ಅವರ ವಾಣಿಜ್ಯ ಸಂಕೀರ್ಣದಲ್ಲಿ ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಶ್ರೀ ವೀರಪುಲಕೇಶಿ ಕೋ-ಆಪರೇಟಿವ್ ಬ್ಯಾಂಕ್‌ನ 14ನೇ ಶಾಖೆಯನ್ನು ಶಿರಹಟ್ಟಿ ಸಂಸ್ಥಾನಮಠದ ಜಗದ್ಗುರು ಶ್ರೀ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು ಉದ್ಘಾಟಿಸಿದರು.

> "ಹಣಕಾಸಿನ ವ್ಯವಹಾರಗಳಲ್ಲಿ ಪ್ರಾಮಾಣಿಕತೆ ಮತ್ತು ನಿಸ್ವಾರ್ಥ ಸೇವೆ ಇದ್ದರೆ ಸಹಕಾರಿ ಬ್ಯಾಂಕುಗಳು ಎಂದಿಗೂ ಹೆಸರು ಕೆಡಿಸಿಕೊಳ್ಳುವುದಿಲ್ಲ".
> **– ಜಗದ್ಗುರು ಶ್ರೀ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು**

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಹಕಾರ ಕ್ಷೇತ್ರವು ಕೆಲವು ವರ್ಷಗಳ ಹಿಂದೆ ಹಿನ್ನಡೆ ಅನುಭವಿಸಿದ್ದರೂ, ನಿಸ್ವಾರ್ಥ ಸೇವೆ ಮನೋಭಾವ ಹೊಂದಿದವರಿಂದ ಮತ್ತೆ ಪ್ರಗತಿಯ ದಾರಿಗೆ ಬಂದಿದೆ ಎಂದರು. ಹಣಕಾಸು ವ್ಯವಹಾರಗಳಲ್ಲಿ ಪ್ರಾಮಾಣಿಕತೆ ಅತ್ಯಂತ ಮುಖ್ಯವಾಗಿದ್ದು, ಗ್ರಾಹಕರ ವಿಶ್ವಾಸವನ್ನು ಕಾಪಾಡಿಕೊಳ್ಳುವುದು ಬ್ಯಾಂಕುಗಳ ಪ್ರಮುಖ ಹೊಣೆಗಾರಿಕೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಬ್ಯಾಂಕಿನ ಅಧ್ಯಕ್ಷ ಹಾಗೂ ಮಾಜಿ ಶಾಸಕ ಎಂ.ಕೆ. ಪಟ್ಟಣಶೆಟ್ಟಿ ಮಾತನಾಡಿ, ಬ್ಯಾಂಕ್ ಈಗಾಗಲೇ 13 ಶಾಖೆಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದು, 14ನೇ ಶಾಖೆಯೂ ಜನರ ವಿಶ್ವಾಸ ಗಳಿಸುವುದರಲ್ಲಿ ಯಶಸ್ವಿಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಮಾಜಿ ಶಾಸಕರುಗಳಾದ ಜಿ.ಎಸ್. ಗಡ್ಡದೇವರಮಠ, ರಾಮಣ್ಣ ಲಮಾಣಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಲೋಕಪ್ಪನ ಹೊಲ ಗ್ರಾಮದಲ್ಲಿ ಸಂಘಟನಾ ಸಭೆ – ಹಳ್ಳಿ ಮಟ್ಟದಲ್ಲಿ ಸಂಘಟನೆ ಬಲಪಡಿಸಲು ನಿರ್ಧಾರ

## ಒಂಟಿ ಮಹಿಳೆಯರ ಭವಿಷ್ಯ ಭದ್ರತೆಗೆ ಸರ್ಕಾರದ ಕ್ರಮ ಅಗತ್ಯ

■ ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಗಂಡನನ್ನು ಕಳೆದುಕೊಂಡ ಮಹಿಳೆಯರು ತಮ್ಮ ಮಕ್ಕಳೊಂದಿಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸರ್ಕಾರದಿಂದ ಸೂಕ್ತ ಸಹಕಾರ ದೊರಕಬೇಕು ಎಂದು ಜನವಾದಿ ಮಹಿಳಾ ಸಂಘಟನೆ ತಾಲೂಕು ಕಾರ್ಯದರ್ಶಿ ಸರ್ದಾರ್ ಹುಲಿಗಮ್ಮ (ಸರ್ದಾರ್ ವಿನೋದ) ಅಭಿಪ್ರಾಯಪಟ್ಟರು.

ತಾಲೂಕಿನ ಲೋಕಪ್ಪನ ಹೊಲ ಗ್ರಾಮದಲ್ಲಿ ಜನವಾದಿ ಮಹಿಳಾ ಸಂಘಟನೆಯ ಆಶ್ರಯದಲ್ಲಿ ನಡೆದ ಒಂಟಿ ಮಹಿಳೆಯರ ಸಂಘಟನಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪತಿಯನ್ನು ಕಳೆದುಕೊಂಡ ಬಳಿಕ ಕೆಲ ಮಹಿಳೆಯರು ತವರು ಮನೆಯಲ್ಲಿ ಆಶ್ರಯ ಪಡೆಯುತ್ತಿದ್ದು, ಇನ್ನೂ ಕೆಲವರು ಗಂಡನ ಮನೆಯಲ್ಲಿ ಉಳಿಯುತ್ತಿದ್ದಾರೆ. ಆದರೆ ಹಲವರು



ಯಾವುದೇ ಆಶ್ರಯವಿಲ್ಲದೆ ಮಕ್ಕಳೊಂದಿಗೆ ಸಂಕಷ್ಟಕರ ಜೀವನ ನಡೆಸುತ್ತಿದ್ದಾರೆ. ಇಂತಹ ಮಹಿಳೆಯರಿಗೆ ಸರ್ಕಾರ ಆಶ್ರಯ ಕಲ್ಪಿಸುವುದರ ಜೊತೆಗೆ ಜೀವನೋಪಾಯಕ್ಕೆ ನೆರವಾಗುವ ಯೋಜನೆಗಳನ್ನು ಜಾರಿಗೆ ತರಬೇಕು ಎಂದು ಅವರು ಆಗ್ರಹಿಸಿದರು.

ಒಂಟಿ ಮಹಿಳೆಯರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲು ತಾಲೂಕಿನ ಪ್ರತಿ ಹಳ್ಳಿಯಲ್ಲೂ ಸಂಘಟನೆಯನ್ನು ಬಲಪಡಿಸಲಾಗುವುದು. ಅದರ ಭಾಗವಾಗಿ ಲೋಕಪ್ಪನ ಹೊಲ ಗ್ರಾಮ ಘಟಕವನ್ನು ಸ್ಥಾಪಿಸಲಾಗಿದೆ ಎಂದರು. ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಕಾರ್ಖಾನೆಗಳು ಸಿಎಸ್‌ಆರ್ ನಿಧಿಯಡಿ ಇಂತಹ ಅಬಲೆಯರಿಗೆ ಸಹಾಯ ಮಾಡಬೇಕು ಎಂದು ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಸದಸ್ಯರಿಗೆ ಗುರುತಿನ ಚೀಟಿಗಳನ್ನು ವಿತರಿಸಲಾಯಿತು.

ಗ್ರಾಮ ಘಟಕದ ಅಧ್ಯಕ್ಷೆ ಪಾರ್ವತಿ, ಉಪಾಧ್ಯಕ್ಷೆ ಅಭಿಲಾಷೆ, ಕಾರ್ಯದರ್ಶಿ ಕಾಳಿ ಮಂಜುಳಾ ಸೇರಿದಂತೆ ಸಂಘಟನೆಯ ಸದಸ್ಯರು ಉಪಸ್ಥಿತರಿದ್ದರು.

# ಕನ್ನಡ ಭವನಕ್ಕೆ ಹೊಸ ಪದಾಧಿಕಾರಿಗಳ ಪದಗ್ರಹಣ

■ವಿಜಯಸಾಕ್ಷಿ ಸುದ್ದಿ, ಗದಗ

ಶಿರಹಟ್ಟಿ ತಾಲೂಕಿನ ಫಕೀರೇಶ್ವರ ನಗರದಲ್ಲಿ ಎಚ್.ಎಂ. ದೇವಗಿರಿ ಅವರ ನಿವಾಸದಲ್ಲಿ ಕಾಸರಗೋಡಿನ ಕನ್ನಡ ಭವನ, ಗ್ರಂಥಾಲಯ (ರಿ) ಗದಗ ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮವನ್ನು ಜಿಲ್ಲಾ ಘಟಕದ ಅಧ್ಯಕ್ಷ ಡಾ. ಸಂಗಮೇಶ ತಮ್ಮನಗೌಡ (ಲಕ್ಷ್ಮೇಶ್ವರ) ಅಧ್ಯಕ್ಷತೆಯಲ್ಲಿ ಆಯೋಜಿಸಲಾಯಿತು. ಪದಾಧಿಕಾರಿಗಳು ಈ ಕೆಳಗಿನಂತೆ ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಡಾ. ಸಂಗಮೇಶ ತಮ್ಮನಗೌಡ, ಲಕ್ಷ್ಮೇಶ್ವರ, ಗೌರವಾಧ್ಯಕ್ಷರಾಗಿ ಭೈರನಹಟ್ಟಿ ದೊರೆಸ್ವಾಮಿ ವಿರಕ್ತಮಠ, ಶಾಂತಲಿಂಗ ಮಹಾ ಸ್ವಾಮೀಜಿಗಳು, ಗೋವನಾಳದ ಪೂಜ್ಯಶ್ರೀ ರಮೇಶ ಮಹಾಸ್ವಾಮಿಗಳು, ಉಪಾಧ್ಯಕ್ಷರಾಗಿ ರತ್ನಾ ಗಿರೋಸಾಬಾದಿ, ಶಿರಹಟ್ಟಿ, ಕಾರ್ಯದರ್ಶಿಯಾಗಿ ಸುಭಾಷ್ ಎಚ್. ಪೂಜಾರ, ಶಿಗ್ಲಿ, ಸಹ ಕಾರ್ಯದರ್ಶಿಯಾಗಿ ಶಿವಾನಂದ ಪರಸಣ್ಣವರ, ಕೊತಬಾಳ ತಾಲೂಕು, ರೋಣ, ಕೋಶಾಧ್ಯಕ್ಷರು - ಎಂ.ಎಂ. ಖಂಡೋಜಿ, ಲಕ್ಷ್ಮೇಶ್ವರ ಇವರು ಪದಗ್ರಹಣ ಮಾಡಿದರು.

ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಶಂಕ್ರಪ್ಪ ಸಿಳ್ಳಿನ, ಲಕ್ಷ್ಮೇಶ್ವರ, ಸಿ.ಜಿ. ಹಿರೇಮಠ, ಲಕ್ಷ್ಮೇಶ್ವರ, ಪೂರ್ಣಾಜಿ ಖರಾಟೆ, ಅಲ್ಲಾಸಾಬ್ ನದಾಫ್ ಶೋಭಾ ಅವರನ್ನು ನೇಮಕ ಮಾಡಲಾಯಿತು.



ಗಾಳಿ-ಮಳೆಯಿಂದ ಮನೆ ಹಾನಿ – ರೈತರು, ವ್ಯಾಪಾರಸ್ಥರು ಆರ್ಥಿಕ ಸಂಕಷ್ಟದಲ್ಲಿ..!

# ಅಕಾಲಿಕ ಮಳೆಗೆ ಬೆಳೆ ಹಾನಿ ಆತಂಕ!




"ಬೇಸಿಗೆಯಲ್ಲಿ ಅಕಾಲಿಕ ಮಳೆಯಾದರೆ ಜೋಳ, ಗೋಧಿ, ಸೂರ್ಯಕಾಂತಿ, ಹತ್ತಿ ಸೇರಿದಂತೆ ಬೆಳೆಗಳಿಗೆ ತೀವ್ರ ಹಾನಿಯಾಗುತ್ತದೆ. ಈಗಾಗಲೇ ಕಟಾವಿಗೆ ಬಂದಿರುವ ಬೆಳೆಗಳು ಹಾಳಾದರೆ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ. ಸರ್ಕಾರ ತಕ್ಷಣ ಸೂಕ್ತ ಪರಿಹಾರ ನೀಡಬೇಕು."

– **ಯಲ್ಲಪ್ಪ ಕರಿಮುಡಿ,** ಅಧ್ಯಕ್ಷರು, ಅಖಿಲ ಕರ್ನಾಟಕ ಕಿಸಾನ ಜಾಗೃತ ಸಂಘ.

■ವಿಜಯಸಾಕ್ಷಿ ಸುದ್ದಿ, ಡಂಬಳ

ಬೇಸಿಗೆ ವೇಳೆಯಲ್ಲೇ ಸುರಿದ ಅಕಾಲಿಕ ಮಳೆಯಿಂದ ಡಂಬಳ ಹೋಬಳಿಯ ಗ್ರಾಮಗಳಲ್ಲಿ ರೈತರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ. ಬುಧವಾರ ಧಾರಾಕಾರವಾಗಿ ಸುರಿದ ಮಳೆ, ಗುಡುಗು-ಸಿಡಿಲು ಹಾಗೂ ಜೋರಾದ ಗಾಳಿಯಿಂದ ವಿವಿಧ ಬೆಳೆಗಳಿಗೆ ಹಾನಿಯಾಗುವ ಭೀತಿ ಉಂಟಾಗಿದೆ.

ಮಂಗಳವಾರ ರಾತ್ರಿ ಸುರಿದ ಮಳೆ ಹಾಗೂ ಗಾಳಿಗೆ ದಿಂಡೂರ ಗ್ರಾಮದ ಶಿವಪ್ಪ ಗುರುನಾಥ ಲಮಾಣಿ ಅವರ ತಗಡಿನ ಮನೆಯ ಚಾವಣಿ ಹಾರಿ ಹೋಗಿ, ಶಿವಪ್ಪ ಲಮಾಣಿ, ಸುಮಿತ್ರಾ ಲಮಾಣಿ ಹಾಗೂ ದೇವಲಪ್ಪ ಲಮಾಣಿ ಗಾಯಗೊಂಡಿದ್ದಾರೆ. ಮನೆಯಲ್ಲಿದ್ದ ದವಸಧಾನ್ಯಗಳು ಹಾನಿಗೊಳಗಾಗಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಡಂಬಳ ಹೋಬಳಿಯ ವಿವಿಧ ಗ್ರಾಮಗಳಲ್ಲಿ ಜೋಳ, ಹತ್ತಿ, ಗೋಧಿ ಸೇರಿದಂತೆ ಹಲವಾರು ಬೆಳೆಗಳಿಗೆ ಹಾನಿಯಾಗುವ ಸಾಧ್ಯತೆ ಹೆಚ್ಚಿದೆ. ಜೋಳದ ಕಾಳುಗಳು ತೇವಾಂಶದಿಂದ ಗುಣಮಟ್ಟ ಕಳೆದುಕೊಳ್ಳುವ ಭೀತಿ ಎದುರಾಗಿದೆ. ಸೂರ್ಯಕಾಂತಿ ಬೆಳೆಗಳಲ್ಲಿ ಹೂವು ಹಾಗೂ ಬೀಜಗಳ ಮೇಲೆ ಮಳೆಯ ಪರಿಣಾಮ ಬಿದ್ದು ಇಳುವರಿ ಕಡಿಮೆಯಾಗುವ ಆತಂಕ ವ್ಯಕ್ತವಾಗಿದೆ.

ರೈತರು ಜೋಳದ ಮೇವು ಹಾಗೂ ಸಂಗ್ರಹಿತ ಸೆಂಗಾ ಹೊಟ್ಟನ್ನು ರಕ್ಷಿಸಲು ತಾಡಫಲಗಳಿಂದ ಮುಚ್ಚುವ ಕಾರ್ಯದಲ್ಲಿ ತೊಡಗಿದ್ದಾರೆ.

ಮಾವಿನ ತೋಟಗಳಲ್ಲಿ ಗಾಳಿ ಮಳೆಯಿಂದ ಹಣ್ಣು ಉದುರಿ ಬೀಳುವ ಭೀತಿ ಹೆಚ್ಚಾಗಿದೆ.

ಇದೇ ವೇಳೆ, ಹುಣಸೆ ಹಣ್ಣು ಕಟಾವಿನ ಹಂತದಲ್ಲಿರುವ ವ್ಯಾಪಾರಸ್ಥರು ಜೋರಾದ ಗಾಳಿಮಳೆಯಿಂದ ನಷ್ಟ ಅನುಭವಿಸುವ ಆತಂಕದಲ್ಲಿದ್ದಾರೆ.

ಈ ಭಾಗದಲ್ಲಿ ಇರುವ ಇಟ್ಟಂಗಿ ಬಟ್ಟಿಗಳ ಮೇಲೂ ಮಳೆಯ ಪರಿಣಾಮ ಬಿದ್ದಿದ್ದು, ಲಕ್ಷಾಂತರ ರೂಪಾಯಿ ಹೂಡಿಕೆ ಮಾಡಿ ತಯಾರಿಸಿದ ಇಟ್ಟಿಗೆಗಳು ಹಾನಿಗೊಳಗಾಗುವ ಸಾಧ್ಯತೆ ಇದೆ. ಇದರಿಂದ ಇಟ್ಟಂಗಿ ಬಟ್ಟಿ ಮಾಲಿಕರು ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಒಟ್ಟಾರೆ ಅಕಾಲಿಕ ಮಳೆ ರೈತರು, ತೋಟಗಾರಿಕಾ ಬೆಳೆಗಾರರು, ವ್ಯಾಪಾರಸ್ಥರು ಹಾಗೂ ಇಟ್ಟಂಗಿ ಬಟ್ಟಿ ಮಾಲಿಕರನ್ನು ಆರ್ಥಿಕ ಸಂಕಷ್ಟದ ಅಂಚಿಗೆ ತಳ್ಳಿದೆ.

ಶಾರ್ಟ್ ಸರ್ಕ್ಯೂಟ್‌ನಿಂದ ಗೋವುಗಳ ಸಾವು ಪ್ರಕರಣ

# ಹೆಸ್ಕಾಂ ವಿರುದ್ಧ ಭಗತ್‌ಸಿಂಗ ಅಭಿಮಾನಿ ಬಳಗದ ಪ್ರತಿಭಟನೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದಲ್ಲಿನ ವಿದ್ಯುತ್ ಪರಿವರ್ತಕಗಳ (ಟ್ರಾನ್ಸ್‌ಫಾರ್ಮರ್) ಸುತ್ತ ತಂತಿ ಬೇಲಿ ಮತ್ತು ಎಚ್ಚರಿಕೆ ಫಲಕಗಳನ್ನು ತ್ವರಿತವಾಗಿ ಜಾರಿಗೊಳಿಸಲು ಒತ್ತಾಯಿಸಿ ಭಗತ್ ಸಿಂಗ್ ಅಭಿಮಾನಿಗಳು

ಹೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ, ಗೇಟ್ ಮುಚ್ಚಿ ಪ್ರತಿಭಟನೆ ನಡೆಸಿದರು.

ಭಗತ್‌ಸಿಂಗ ಅಭಿಮಾನಿ ಬಳಗದ ಮಂಜು ಮುಳಗುಂದ ಮನವಿ ಸಲ್ಲಿಸಿ ಮಾತನಾಡಿ, "22-03-2026ರಂದು ರಾತ್ರಿ ತಿಲಕ ಪಾರ್ಕ್ ಮುಂಭಾಗದ ವಿದ್ಯುತ್ ಪರಿವರ್ತಕದಲ್ಲಿ ಶಾರ್ಟ್ ಸರ್ಕ್ಯೂಟಿನ ಪರಿಣಾಮವಾಗಿ ಐದು ಗೋವುಗಳ ಮರಣ ಸಂಭವಿಸಿದೆ. ಇದು ವಿದ್ಯುತ್ ಇಲಾಖೆಯ ನಿರ್ಲಕ್ಷ್ಯದ ನೇರ ಫಲವಾಗಿದೆ. ನಮ್ಮ ದೇಶದಲ್ಲಿ ಗೋಮಾತೆಯನ್ನು ತಾಯಿಯಂತೆ ಪೂಜಿಸುತ್ತೇವೆ. ಅಮಾಯಕ ಜೀವಿಗಳಿಗೆ ಈ ರೀತಿಯ ಅನಾಥ ಪರಿಸ್ಥಿತಿ ಸೃಷ್ಟಿಯಾದುದು ಮನಕಲಕುವ ಘಟನೆಯಾಗಿದೆ. ಮುಂದಿನ ಅಪಘಾತ ತಪ್ಪಿಸಲು ತುರ್ತಾಗಿ ಎಲ್ಲಾ ಕಂಬಗಳನ್ನು ಪರಿಶೀಲಿಸಿ, ತಂತಿ ಬೇಲಿ ಮತ್ತು ಎಚ್ಚರಿಕೆ ಫಲಕಗಳನ್ನು ಜಾರಿಗೆ ತರಬೇಕು" ಎಂದರು.

ನಮ್ಮ ಮನವಿಗೆ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಪುನರಾವರ್ತಿಸಿದರೆ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ" ಎಂದು ಎಚ್ಚರಿಕೆ ನೀಡಿದರು.

ನಗರಸಭೆ ಸದಸ್ಯ ಮೆಹಬೂಬಸಾಬ್ ನದಾಫ ಮಾತನಾಡಿ, "ಈ ಘಟನೆಯಿಂದ ವಿದ್ಯುತ್ ಇಲಾಖೆಯ ನಿರ್ಲಕ್ಷ್ಯ ಸ್ಪಷ್ಟವಾಗಿದೆ. ತಮ್ಮ ತಪ್ಪುಗಳನ್ನು ತಕ್ಷಣ ಸರಿಪಡಿಸಿಕೊಳ್ಳಬೇಕು" ಎಂದರು.

ಈ ಸಂದರ್ಭದಲ್ಲಿ ವಸಂತ ಪಡಗದ, ಬಸವರಾಜ ಗುಡದೂರ, ಮಂಜುನಾಥ ಹುಡೇದ, ಪ್ರವೀಣ, ನವೀನ್, ಅನಿಲ್, ಅಭಿಷೇಕ, ಮಹೇಶ, ದೀಪು, ಫೈರೋಜ್, ಕಿರಣ, ಗಿರೀಶ, ಪ್ರಶಾಂತ ನಾಯ್ಕರ್, ಕುಮಾರ ಮಾರನಬಸರಿ, ವಿನಾಯಕ, ಭರತ, ಪ್ರಕಾಶ, ಸುನೀಲ ಶೆಟ್ಟಿ, ಮಂಜು, ಶ್ರೀಧರ, ಸಂಗು, ಪ್ರಸನ್ನ, ನಿಂಗರಾಜ, ಆಕಾಶ, ವಿರೇಶ್ ಸೇರಿದಂತೆ ರೈತರು, ಸಾರ್ವಜನಿಕರು ಇದ್ದರು.

# ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ದೇವಸ್ಥಾನ ಪುನರ್ನಿರ್ಮಾಣಕ್ಕೆ ಪ್ರೋತ್ಸಾಹ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಗೊಜನೂರು ವಲಯದ ಕುಂದ್ರಳ್ಳಿ ಕಾರ್ಯಕ್ಷೇತ್ರದ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಮಂಗಳವಾರ ಸುಮಾರು 1 ಲಕ್ಷ 50 ಸಾವಿರ ರೂಪಾಯಿ ಅನುದಾನದ ಚೆಕ್ ಅನ್ನು ಶ್ರೀ ಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ವಿತರಿಸಲಾಯಿತು. ಚೆಕ್ ಅನ್ನು ಗದಗ ಜಿಲ್ಲೆಯ ಜಿಲ್ಲಾ ನಿರ್ದೇಶಕರು ಕೇಶವ್ ದೇವಾಂಗ ದೇವಸ್ಥಾನ ಕಮಿಟಿ ಮುಖ್ಯಸ್ಥರಿಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೇಶವ್ ದೇವಾಂಗ ಅವರು, "ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಾರ್ಗದರ್ಶನದಲ್ಲಿ, ಪೂಜ್ಯ ಶ್ರೀ ವೀರೇಂದ್ರ ಹೆಗ್ಗಡೆಯವರ ಅನುಗ್ರಹದೊಂದಿಗೆ, ದೇವಸ್ಥಾನಗಳ ಜೀರ್ಣೋದ್ಧಾರ, ಕೆರೆ ಅಭಿವೃದ್ಧಿ, ಮಾಶಾಸನ ವಿತರಣೆ, ಸುಜ್ಞಾನನಿಧಿ ಕಾರ್ಯ ಕ್ರಮ ಹಾಗೂ ಇತರ ಸಮಾಜಮುಖಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿದ್ದಾರೆ" ಎಂದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ. ಅಧ್ಯಕ್ಷ ಮಂಜಪ್ಪ ಕಳಸದ, ಉಪಾಧ್ಯಕ್ಷ ಬಸಪ್ಪ ತಳವಾರ, ಸದಸ್ಯರು ರುದ್ರಯ್ಯ ಶೀಲವಂತರಮಠ, ಮಂಜುನಾಥ ಗೌರಿ, ರೇಣುಕಾ ದೇವಿ ದೇವಸ್ಥಾನ ಕಮಿಟಿಯ ಅಧ್ಯಕ್ಷ ಯಶವಂತಗೌಡ ಪಾಟೀಲ, ಉಪಾಧ್ಯಕ್ಷರಾದ ಬಸವನಗೌಡ ಪಾಟೀಲ್, ಹಿರಿಯರಾದ ಶಿವಲಿಂಗಯ್ಯ ಬಾಳೆಹಳ್ಳಿಮಠ, ಎಂ.ಡಿ. ಪಾಟೀಲ್, ಹಾಲಪ್ಪ ಹಳ್ಳಿಕೇರಿ, ಹಾಲಪ್ಪ ಹಂಗಿನಕಟ್ಟಿ, ನಾಗರಾಜ ಪಾಟೀಲ್, ರಮೇಶ್ ಸೊರಟೂರು, ಹಾಗೂ ತಾಲೂಕು ಯೋಜನಾಧಿಕಾರಿ ಪುನೀತ್ ಓಲೇಕಾರ್, ವಲಯದ ಮೇಲ್ವಿಚಾರಕಿ ಗಂಗೋತ್ರಿಗೌಡ ಮತ್ತು ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.



# ಅಡರಕಟ್ಟಿ ಶಾಲೆಯಲ್ಲಿ ವಿಜ್ಞಾನ-ಗಣಿತ ಸ್ಪರ್ಧೆ: ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಅಡರಕಟ್ಟಿ ಗ್ರಾಮದ ಪಿ.ಎಂ.ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಮಕ್ಕಳಿಗಾಗಿ ಸಹಪಠ್ಯ ಚಟುವಟಿಕೆಗಳನ್ನು ಏರ್ಪಡಿಸಿ, ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಸ್ಪರ್ಧೆಗಳು ನಡೆಸಲ್ಪಟ್ಟು ಬಹುಮಾನಗಳನ್ನು ವಿತರಿಸಲಾಯಿತು.

ಈ ಶಾಲೆಯನ್ನು ಪಿ.ಎಂ. ಶ್ರೀ ಯೋಜನೆಯ ಭಾಗವಾಗಿ ಆಯ್ಕೆ ಮಾಡಲಾಗಿದ್ದು, ಗಣಿತ ವೃತ್ತ ಮತ್ತು ವಿಜ್ಞಾನ ವೃತ್ತದಲ್ಲಿ ಹಲವಾರು ಶೈಕ್ಷಣಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಸ್ತು ಪ್ರದರ್ಶನ ಮೆಟ್ರಿಕ್ ಮೇಳ, ಗಣಿತ ಆಕೃತಿಗಳ ರಂಗೋಲಿ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ರಸಪ್ರಶ್ನೆ, ಚರ್ಚಾ ಸ್ಪರ್ಧೆ, ಮಾದರಿ ತಯಾರಿಕೆ ಮುಂತಾದ ಸ್ಪರ್ಧೆಗಳು ಆಯೋಜಿಸಲಾಯಿತು.

ಮಕ್ಕಳಿಗಾಗಿ ಉತ್ತಮ ಗುಣಮಟ್ಟದ ಶಾಲಾ ಬ್ಯಾಗ್, ಗಡಿಯಾರ, ನೀರಿನ ಬಾಟಲ್, ಪುಸ್ತಕ ಮತ್ತು ಡಿಕ್ಷನರಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಎಸ್‌ಡಿಎಂಸಿ ಅಧ್ಯಕ್ಷ ಮಲ್ಲೇಶಪ್ಪ ಅಡರಕಟ್ಟಿ ಅವರು, "ಪಿ.ಎಂ. ಶ್ರೀ ಯೋಜನೆ ಮಕ್ಕಳ ಸರ್ವಾಂಗೀಣ ಪ್ರಗತಿಗೆ ಒತ್ತು ನೀಡುತ್ತಿದೆ. ವಿದ್ಯಾರ್ಥಿಗಳು ಇದರಿಂದ ಸದುಪಯೋಗ ಪಡೆಯಬೇಕು" ಎಂದು ಹೇಳಿದರು.

ಶಾಲೆಯ ಮುಖ್ಯೋಪಾಧ್ಯಾಯ ಐ.ಎಸ್. ನೇಕಾರ ಮಾತನಾಡಿ, "ಗಣಿತ ಮತ್ತು ವಿಜ್ಞಾನ ಸ್ಪರ್ಧೆಗಳು ಮಕ್ಕಳಲ್ಲಿ ವಿಚಾರಶೀಲತೆ ಮತ್ತು ಸೃಜನಶೀಲತೆಯನ್ನು ಉತ್ತೇಜಿಸುತ್ತವೆ. ಇದು ಅವರಿಗೆ ತಮ್ಮ ಸಮಸ್ಯೆಗಳನ್ನು ಸ್ವತಃ ಪರಿಹರಿಸುವ ಸಾಮರ್ಥ್ಯ ಮತ್ತು ಸಮಾಜಮುಖಿ ಬೆಳವಣಿಗೆ ನೀಡುತ್ತದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಪದಾಧಿಕಾರಿಗಳು, ಶಿಕ್ಷಕರೂ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು, ಮಕ್ಕಳಿಗೆ ಮಾರ್ಗದರ್ಶನ ನೀಡಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಹಿಳೆಯ ಸಾಧನೆಗೆ ಪ್ರಶಂಸೆ!

# ಮಹಿಳೆಯ ಶಕ್ತಿ ಅನನ್ಯ: ಅದನ್ನು ಅರಿಯುವುದು ಅಗತ್ಯ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮಹಿಳೆಯ ಶಕ್ತಿ ಎಲ್ಲ ರೀತಿಯಲ್ಲಿಯೂ ಅನನ್ಯವಾಗಿದ್ದು, ಅವಳ ಸಂಯಮ ಮತ್ತು ಸಾಮರ್ಥ್ಯ ಯಾವುದೇ ಕೆಲಸವನ್ನೂ ಯಶಸ್ವಿಯಾಗಿ ನಿರ್ವಹಿಸಲು ಸಾಕಷ್ಟು ಬಲ ನೀಡುತ್ತದೆ ಎಂದು ಶ್ರೀ ಅನ್ನಪೂರ್ಣೇಶ್ವರಿ ಮಹಿಳಾ ಮಂಡಳದ ಅಧ್ಯಕ್ಷೆ ಕಸ್ತೂರಿ ಧನ್ನೂರ ಹೇಳಿದರು.

ಪಟ್ಟಣದ ಡಾ. ಕೆ.ಬಿ. ಧನ್ನೂರ ಪಿಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, "ಹಿಂದಿನ ಕಾಲದಂತೆ ಇಂದಿನ ಮಹಿಳೆಯ ಜಗತ್ತು ಮನೆಯ ಹೊಸ್ತಿಲೊಳಗೆ ಸೀಮಿತವಾಗಿಲ್ಲ. ಕಲೆ, ಸಂಗೀತ, ಸಾಹಿತ್ಯ, ನೃತ್ಯ, ಸಮಾಜಸೇವೆ ಹಾಗೂ ರಾಜಕೀಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಅವಕಾಶ ನೀಡಿದರೆ ಮಹಿಳೆಯರು ಅದನ್ನು ಅತ್ಯುತ್ತಮವಾಗಿ ಸದುಪಯೋಗಪಡಿಸಿಕೊಳ್ಳುತ್ತಾರೆ" ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಕೆ.ಬಿ. ಧನ್ನೂರ ಮಾತನಾಡಿ, "ಮಹಿಳೆಯರು ಸೂಕ್ಷ್ಮಮತಿಗಳು ಮಾತ್ರವಲ್ಲ, ಛಲ ಮತ್ತು ದೃಢತೆಯ ಪ್ರತೀಕವೂ ಆಗಿದ್ದಾರೆ. ಅವರು ಕೈಗೊಂಡ ಕೆಲಸವನ್ನು ಪೂರ್ಣಗೊಳಿಸುವವರೆಗೆ ಹಿಂಜರಿಯುವುದಿಲ್ಲ. ಪುರುಷ ಸಮಾಜವು ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡುವುದು ಅಗತ್ಯ" ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಶಾಲೆಯ ಮಹಿಳಾ ಶಿಕ್ಷಕಿಯರಿಗಾಗಿ ವಿವಿಧ ಸ್ಪರ್ಧೆಗಳು ಆಯೋಜಿಸಲಾಯಿತು. ಕೇಕ್ ಕಟ್ ಮಾಡುವ ಮೂಲಕ ಮಹಿಳಾ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮವನ್ನು ಮುಖ್ಯ ಶಿಕ್ಷಕ ಮಂಜುನಾಥ ಗ್ರಾಮಪುರೋಹಿತ ನಿರೂಪಿಸಿದರು. ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕ ಸುರೇಶ್ ಮಲ್ಲನಗೌಡರು ಸ್ವಾಗತಿಸಿದರು. ಶಿಕ್ಷಕ ವೀರೇಶ್ ಜೋಗಿ ವಂದಿಸಿದರು.




24 ಗಂಟೆಯೊಳಗೆ ನಾಲ್ವರು ಆರೋಪಿಗಳ ಬಂಧನ-ಎಸ್ಪಿ ಗುಂಜನ್ ಆರ್ಯ

# ರಾಮಾಪೂರ ಕೊಲೆ ಪ್ರಕರಣ ಭೇದಿಸಿದ ಧಾರವಾಡ ಗ್ರಾಮೀಣ ಪೊಲೀಸರು!









ರಾಮಾಪೂರ ಸಮೀಪ ನಡೆದ ರಾಜು ಬೊಳಶೆಟ್ಟಿ ಹತ್ಯೆ ಪ್ರಕರಣವನ್ನು ಧಾರವಾಡ ಗ್ರಾಮೀಣ ಪೊಲೀಸರು ಕೇವಲ 24 ಗಂಟೆಯಲ್ಲಿ ಭೇದಿಸಿದ್ದಾರೆ. ಕೊಲೆ ಬಳಿಕ ಶವವನ್ನು ಕಾರು ಸಮೇತ ಸುಟ್ಟು ಸಾಕ್ಷ್ಯ ನಾಶಪಡಿಸಲು ಆರೋಪಿಗಳು ಯತ್ನಿಸಿದ್ದರು. ಸಿಸಿಟಿವಿ ಹಾಗೂ ಸಿಡಿಆರ್ ಆಧಾರದ ಮೇಲೆ ನಾಲ್ವರನ್ನು ಬಂಧಿಸಲಾಗಿದ್ದು, ವೈಯಕ್ತಿಕ ದ್ವೇಷವೇ ಹತ್ಯೆಗೆ ಕಾರಣವೆಂದು ತನಿಖೆಯಲ್ಲಿ ಬಹಿರಂಗವಾಗಿದೆ.

■ವಿಜಯಸಾಕ್ಷಿ ಸುದ್ದಿ, ಧಾರವಾಡ

ರಾಮಾಪೂರ ಗ್ರಾಮದ ಹತ್ತಿರ ನಡೆದಿದ್ದ ಭೀಕರ ಹತ್ಯೆ ಪ್ರಕರಣವನ್ನು ಧಾರವಾಡ ಗ್ರಾಮೀಣ ಪೊಲೀಸರು ಕೇವಲ 24 ಗಂಟೆಯೊಳಗೆ ಭೇದಿಸಿ ನಾಲ್ವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ತಿಳಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಅವರು, ಮಾರ್ಚ್ 24ರಂದು ಸಂಜೆ 5 ಗಂಟೆಗೆ ಮಂಜುನಾಥ ಅಣ್ಣಪ್ಪ ಬೊಳಶೆಟ್ಟಿ ಅವರು ನೀಡಿದ ದೂರಿನನ್ವಯ ಧಾರವಾಡ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ (ಕ್ರೈಂ ನಂ. 66/2026) ದಾಖಲಾಗಿತ್ತು. ಪ್ರಕರಣವನ್ನು ಭಾರತೀಯ ನ್ಯಾಯ ಸಂಹಿತೆ (BNS) ಕಲಂ 103(1) ಹಾಗೂ 238 ಅಡಿಯಲ್ಲಿ ದಾಖಲಿಸಲಾಗಿತ್ತು.

ಮಾರ್ಚ್ 23ರ ಸಂಜೆ 4 ಗಂಟೆಯಿಂದ ಮಾರ್ಚ್ 24ರ ಬೆಳಿಗ್ಗೆ 11 ಗಂಟೆಯೊಳಗಿನ ಅವಧಿಯಲ್ಲಿ ಬೈಲಹೊಂಗಲ ತಾಲೂಕಿನ ಉಡಿಕೇರಿ ಗ್ರಾಮದ ನಿವಾಸಿ ರಾಜು ಸಣ್ಣಅಣ್ಣಪ್ಪ ಬೊಳಶೆಟ್ಟಿ (53) ಅವರನ್ನು ದುಷ್ಕರ್ಮಿಗಳು ಹತ್ಯೆ ಮಾಡಿದ್ದು, ನಂತರ ಸಾಕ್ಷ್ಯ ನಾಶಪಡಿಸಲು ರಾಮಾಪೂರ ಗ್ರಾಮದ ಹದ್ದಿಯ ರೈಲ್ವೆ ಹಳಿ ಪಕ್ಕದಲ್ಲಿರುವ ನಿಕ್ಕಂ ಅವರ ಜಮೀನಿನಲ್ಲಿ ಮೃತದೇಹವನ್ನು ಕಾರು (ಕೆಎ-24/ಎನ್-0383) ಸಮೇತ ಸುಟ್ಟು ಹಾಕಿರುವುದು ಪತ್ತೆಯಾಗಿತ್ತು.

ಘಟನಾ ಸ್ಥಳದಲ್ಲಿ ರಕ್ತದ ಗುರುತುಗಳಿರುವ ಮಣ್ಣು, ಕ್ಯಾರಿಬ್ಯಾಗ್‌ಗಳು ಸೇರಿದಂತೆ ಹಲವು ಮಹತ್ವದ ಸಾಕ್ಷ್ಯಾಧಾರಗಳು ಪತ್ತೆಯಾಗಿದ್ದು, ಪ್ರಕರಣದ ಗಂಭೀರತೆಯನ್ನು ಸೂಚಿಸಿತ್ತು.

ಪ್ರಕರಣದ ತನಿಖೆಯನ್ನು ಗಂಭೀರವಾಗಿ ಕೈಗೊಂಡ ಪೊಲೀಸರು ವಿಶೇಷ ತಂಡಗಳನ್ನು ರಚಿಸಿ, ಸಿ.ಡಿ.ಆರ್., ಸಿಸಿಟಿವಿ ದೃಶ್ಯಗಳು ಸೇರಿದಂತೆ ತಾಂತ್ರಿಕ ಮತ್ತು ತಾಂತ್ರಿಕೇತರ ಸಾಕ್ಷ್ಯಾಧಾರಗಳ ಆಧಾರದಲ್ಲಿ ಆರೋಪಿತರನ್ನು ಪತ್ತೆ ಹಚ್ಚಿದ್ದಾರೆ.

ಈ ಪ್ರಕರಣದಲ್ಲಿ ಮುನೇರಾ ಶರೀಫ ದಿಲ್ಲುನಾಯ್ಕ (32), ಮೃತ್ಯುಂಜಯ ದೇವಪ್ಪ ಕಂಬಾರ (26) ಬಸವರಾಜ ಪೂಜೇರಿ ಸೇರಿದಂತೆ ಬಾಲಕನನ್ನೂ ಬಂಧಿಸಲಾಗಿದೆ.

ಪ್ರಾಥಮಿಕ ತನಿಖೆಯಲ್ಲಿ, ಮೃತನೊಂದಿಗೆ ಇದ್ದ ಹಳೆಯ ವೈಯಕ್ತಿಕ ದ್ವೇಷವೇ ಹತ್ಯೆಗೆ ಕಾರಣವಾಗಿದ್ದು, ಬೈಲಹೊಂಗಲ ತಾಲೂಕಿನ ಉಡಿಕೇರಿ ಗ್ರಾಮದ ಜಮೀನಿನ ಶೆಡ್ ಮುಂದೆ ಕೊಲೆ ನಡೆಸಿ, ನಂತರ ಶವವನ್ನು ಕಾರು ಸಮೇತ ಸುಟ್ಟು ಸಾಕ್ಷ್ಯ ನಾಶಪಡಿಸಲು ಯತ್ನಿಸಿರುವುದು ಬಹಿರಂಗವಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ಅವರ ಮಾರ್ಗದರ್ಶನದಲ್ಲಿ ಸಿ.ಇ.ಎನ್ ಡಿ.ಎಸ್.ಪಿ ಶಿವಾನಂದ ಕಟಗಿ, ಉಪವಿಭಾಗದ ಡಿ.ಎಸ್.ಪಿ ವಿನೋದ ಮುಕ್ತೆದಾರ ಹಾಗೂ ಪಿ.ಐ ಎಸ್. ಎಸ್. ಕಮತಗಿ ನೇತೃತ್ವದ ಪೊಲೀಸ್ ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸಾಧಕಿಯರಿಗೆ ಗೌರವ – ಚಂದ್ರಕಲಾ ಇಟಗಿಮಠರ ಕಾರ್ಯಕ್ಕೆ ಪ್ರಶಂಸೆ

# ಮಹಿಳಾ ಸಬಲೀಕರಣಕ್ಕೆ ಕಪ್ಪತ್ತಗಿರಿ ಫೌಂಡೇಶನ್ ಮಹತ್ವದ ಹೆಜ್ಜೆ!




■ ವಿಜಯಸಾಕ್ಷಿ ಸುದ್ದಿ, ಗದಗ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಕಪ್ಪತ್ತಗಿರಿ ಫೌಂಡೇಶನ್ (ರಿ) ಗದಗ–ಕಳಸಾಪೂರ ವತಿಯಿಂದ ನಗರದಲ್ಲಿ ಭವ್ಯ ಮಹಿಳಾ ಸಮ್ಮೇಳನ ಆಯೋಜಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರಿಗೆ ಪ್ರಶಸ್ತಿ ಪ್ರದಾನ, ಗೌರವ ಸಮಾರಂಭ, ಪುಸ್ತಕ ಬಿಡುಗಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಕಾರ್ಯಕ್ರಮವು ಕರೆಯಮ್ಮದೇವಿ ಸಭಾಭವನದಲ್ಲಿ ನೆರವೇರಿತು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಭೈರನಹಟ್ಟಿಯ ಶಾಂತಲಿಂಗ ಮಹಾಸ್ವಾಮಿಗಳು, ಫಕೀರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಡಾ. ವೀರಭದ್ರ ಶಿವಾಚಾರ್ಯ ಸ್ವಾಮಿಗಳು ವಹಿಸಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಎಸ್.ವ್ಹಿ. ಸಂಕನೂರು ಅವರು, ಸಂಸ್ಥಾಪಕ ಅಧ್ಯಕ್ಷೆ ಶ್ರೀಮತಿ ಚಂದ್ರಕಲಾ ಇಟಗಿಮಠ ಅವರ ಕಾರ್ಯ ಶ್ಲಾಘನೀಯವಾಗಿದೆ. ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪ್ರಗತಿಗೆ ಇಂತಹ ಕಾರ್ಯಕ್ರಮಗಳು ಪೂರಕವಾಗಿವೆ ಎಂದು ಹೇಳಿದರು.

ಅವರು ಅಂತಾರಾಷ್ಟ್ರೀಯ ಮಹಿಳಾ ದಿನದ ಮಹತ್ವವನ್ನು ವಿವರಿಸಿ, 20ನೇ ಶತಮಾನದ ಕಾರ್ಮಿಕ ಚಳುವಳಿಗಳಿಂದ ಆರಂಭವಾದ ಈ ದಿನವು ಮಹಿಳೆಯರ ಹಕ್ಕುಗಳು, ಸಬಲೀಕರಣ ಮತ್ತು ಸಮಾನತೆಗಾಗಿ ಜಾಗೃತಿ ಮೂಡಿಸುವ ದಿನವಾಗಿದೆ ಎಂದು ಹೇಳಿದರು.

ಸಮ್ಮೇಳನಾಧ್ಯಕ್ಷೆ ಶ್ರೀಮತಿ ವೀಣಾ ಹೇಮಂತಗೌಡ ಪಾಟೀಲ ಮಾತನಾಡಿ, ಮಹಿಳೆಯರನ್ನು ಒಗ್ಗೂಡಿಸಿ ಈ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ ಎಂದರು.

ಕಳಸಾಪೂರ ಗ್ರಾಮದ ಶರದರಾವ್ ಹುಯಿಲಗೋಳ ಮಾತನಾಡಿ, ಸಂಸ್ಥಾಪಕ ಅಧ್ಯಕ್ಷೆಯವರ ನೇತೃತ್ವದಲ್ಲಿ ತಾಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದ ಕಾರ್ಯಕ್ರಮಗಳು ನಡೆಯುತ್ತಿರುವುದು ಹೆಮ್ಮೆ ತಂದಿದೆ. ಹೊರರಾಜ್ಯಗಳಿಂದಲೂ ಕವಿಗಳು ಭಾಗವಹಿಸಿರುವುದು ವಿಶೇಷ ಎಂದರು. ಕಾರ್ಯಕ್ರಮದ ಆರಂಭದಲ್ಲಿ ಹಾತಲಗೇರಿ ನಾಕದ ಕನಕವೃತ್ತದಿಂದ ಕರೆಯಮ್ಮದೇವಿ ದೇವಸ್ಥಾನವರೆಗೆ ಮೆರವಣಿಗೆ ನಡೆಯಿತು. ವ್ಹಿ.ವ್ಹಿ. ನಡುವಿನಮನಿ ಹಾಗೂ ಪ್ರಿಯಾಂಕಾ ನಡುವಿನಮನಿ ದಂಪತಿಗಳು ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ಕಲಾತಂಡಗಳು, ಮಂಗಳ ವಾದ್ಯ, ಆರತಿ ಹಾಗೂ ಕುಂಭ ಕಾರ್ಯಕ್ರಮಗಳು ಗಮನ ಸೆಳೆದವು.

> “ಮಹಿಳೆಯರ ಸಮಾನತೆ ಸಾಧನೆ ಮತ್ತು ಶೋಷಣೆಯನ್ನು ತಡೆಯಲು ಸಂಘಟನೆಗಳ ಪಾತ್ರ ಮಹತ್ವದ್ದಾಗಿದೆ. ಶಿಕ್ಷಣ, ಆರೋಗ್ಯ, ಸಾಹಿತ್ಯ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಇನ್ನಷ್ಟು ಸ್ಥಾನಮಾನ ಪಡೆಯಲು ನಾವು ಶ್ರಮಿಸುತ್ತಿದ್ದೇವೆ.”
>
> – **ಚಂದ್ರಕಲಾ ಇಟಗಿಮಠ,** ಸಂಸ್ಥಾಪಕ ಅಧ್ಯಕ್ಷೆ.

ಈ ಸಂದರ್ಭದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ರಾಷ್ಟ್ರಪ್ರಶಸ್ತಿ, ಶಿಕ್ಷಕ ರತ್ನ, ವೈದ್ಯರತ್ನ, ಕಲಾರತ್ನ, ಸಾಹಿತ್ಯರತ್ನ, ಕೃಷಿರತ್ನ, ಸಂಘಟನಾರತ್ನ, ಸೇವಾರತ್ನ, ಕ್ರೀಡಾರತ್ನ, ಸಮಾಜರತ್ನ, ಚಾಲಕರತ್ನ, ನ್ಯಾಯರತ್ನ ಹಾಗೂ ಆರಕ್ಷಕರತ್ನ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪರಮೇಶ್ವರ ಬೈರಪ್ಪನವರ, ಎ.ಎಸ್. ಮಕಾನದಾರ, ವರ್ಷಾ ಅಂಕಿತಾ ಪಾಟೀಲ, ಬಸವರಾಜ ಬಳ್ಳಾರಿ, ವಿವೇಕಾನಂದಗೌಡ ಪಾಟೀಲ, ಡಿ.ಎಸ್. ತಳವಾರ, ಕೆ.ಪಿ. ಕೋಟಿಗೌಡರು, ತೋಟಯ್ಯ ಗುಡ್ಡಿಮಠ, ಮಲ್ಲಿಕಾರ್ಜುನ ಖಂಡಮ್ಮನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಚಿಕ್ಕವಡ್ಡಟ್ಟಿಯಲ್ಲಿ ವಾಲ್ಮೀಕಿ ಸಮಾಜದ ಮೇಲೆ ಹಲ್ಲೆ ಆರೋಪ

# ಆರೋಪಿಗಳ ತಕ್ಷಣ ಬಂಧನಕ್ಕೆ ಆಗ್ರಹ

■ ವಿಜಯಸಾಕ್ಷಿ ಸುದ್ದಿ, ಗದಗ

ಮುಂಡರಗಿ ತಾಲೂಕಿನ ಚಿಕ್ಕವಡ್ಡಟ್ಟಿ ಗ್ರಾಮದಲ್ಲಿ ವಾಲ್ಮೀಕಿ ನಾಯಕ ಸಮುದಾಯದ ಹಿರಿಯರು, ಮಹಿಳೆಯರು ಹಾಗೂ ಯುವಕರ ಮೇಲೆ ನಡೆದ ಮಾರಣಾಂತಿಕ ಹಲ್ಲೆ ಹಾಗೂ ದೌರ್ಜನ್ಯವನ್ನು ಗದಗ ಜಿಲ್ಲಾ ವಾಲ್ಮೀಕಿ ನಾಯಕ ಸೇವಾ ಸಂಘ ತೀವ್ರವಾಗಿ ಖಂಡಿಸಿ ಮನವಿ ಅರ್ಪಿಸಿದೆ.

ಈ ಸಂಬಂಧ ಜಿಲ್ಲಾಧ್ಯಕ್ಷ ಬಸವರಾಜ ಎಂ. ಬೆಳದಡಿ ಹಾಗೂ ಯುವ ಘಟಕದ ಜಿಲ್ಲಾಧ್ಯಕ್ಷ ಅನಿಲಕುಮಾರ ಸಿದ್ದಮ್ಮನಹಳ್ಳಿ ಅವರ ನೇತೃತ್ವದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಘಟನೆಯಲ್ಲಿ ಭಾಗಿಯಾದ ನೈಜ ಆರೋಪಿಗಳನ್ನು ಕೂಡಲೇ ಬಂಧಿಸಿ ನೊಂದವರಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು.

ಸಂಘದ ಮನವಿಯ ಪ್ರಕಾರ, ಶಾಂತಿಯುತವಾಗಿ ಸಹಬಾಳ್ವೆ ನಡೆಸುತ್ತಿದ್ದ ವಾಲ್ಮೀಕಿ ಸಮಾಜದ ಕಾಲೋನಿಗೆ ನೂರಾರು ಮಂದಿ ಕಿಡಿಗೇಡಿಗಳು ಮಾರಕಾಸ್ತ್ರಗಳೊಂದಿಗೆ ಏಕಾಏಕಿ ನುಗ್ಗಿ, ಕ್ಷುಲ್ಲಕ ಕಾರಣಕ್ಕೆ ಮಹಿಳೆಯರು, ಹಿರಿಯರು ಹಾಗೂ ಯುವಕರ ಮೇಲೆ ಅಮಾನವೀಯವಾಗಿ ಹಲ್ಲೆ ನಡೆಸಿದ್ದಾರೆ. ಈ ದಾಳಿ ಪೂರ್ವಯೋಜಿತ ಸಂಚು ಆಗಿರುವ ಶಂಕೆ ವ್ಯಕ್ತವಾಗಿದೆ ಎಂದು ಆರೋಪಿಸಲಾಗಿದೆ.

ಘಟನೆಯಲ್ಲಿ ಪ್ರಮುಖ ಪಾತ್ರವಹಿಸಿರುವ ಆರೋಪಿಗಳನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಂಘ ಮನವಿಯಲ್ಲಿ ಒತ್ತಾಯಿಸಿದೆ.

ಇನ್ನೊಂದೆಡೆ, ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಪ್ರಕರಣಕ್ಕೆ ಸಂಬಂಧವಿಲ್ಲದ ನಿರಪರಾಧಿಗಳ ಹೆಸರನ್ನು ಸೇರಿಸಿರುವ ಬಗ್ಗೆ ಸಂಘ ಆಕ್ಷೇಪ ವ್ಯಕ್ತಪಡಿಸಿದ್ದು, ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಿ ಅವರ ಹೆಸರನ್ನು ಪ್ರಕರಣದಿಂದ ಕೈಬಿಡಬೇಕು ಎಂದು ಮನವಿ ಮಾಡಿದೆ.

ಪೊಲೀಸ್ ಇಲಾಖೆ ತ್ವರಿತ ಹಾಗೂ ನಿಷ್ಪಕ್ಷಪಾತ ಕ್ರಮ ಕೈಗೊಂಡು ನೊಂದ ಕುಟುಂಬಗಳಿಗೆ ರಕ್ಷಣೆ ಒದಗಿಸಬೇಕು.

ಇಲ್ಲವಾದರೆ ರಾಜ್ಯಾದ್ಯಂತ ವಾಲ್ಮೀಕಿ ಸಮಾಜದ ವತಿಯಿಂದ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಸಂಘದ ಮುಖಂಡರು ಎಚ್ಚರಿಕೆ ನೀಡಿದ್ದಾರೆ.

ಈ ವೇಳೆ ಜಿಲ್ಲಾ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳು, ದೌರ್ಜನ್ಯಕ್ಕೆ ಒಳಗಾದ ಸಮಾಜದ ನೂರಾರು ಮಹಿಳೆಯರು ಮತ್ತು ಮುಖಂಡರು ಉಪಸ್ಥಿತರಿದ್ದರು.



ಭಗತ್‌ಸಿಂಗ್ ಸರ್ಕಲ್‌ನಲ್ಲಿ ಪುಷ್ಪನಮನ, ಮೌನಾಚರಣೆ

# ಭಗತ್‌ಸಿಂಗ್ ಹುತಾತ್ಮ ದಿನದ ಅಂಗವಾಗಿ ಗೌರವ ಸಮರ್ಪಣೆ



> “ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವರ ಬಲಿದಾನವು ಕೇವಲ ಇತಿಹಾಸವಲ್ಲ, ಅದು ಇಂದಿನ ಯುವಪೀಳಿಗೆಗೆ ದೇಶಭಕ್ತಿ ಮತ್ತು ತ್ಯಾಗದ ಶಾಶ್ವತ ಪ್ರೇರಣೆ.”
>
> – **ಮಂಜುನಾಥ ಮುಳಗುಂದ,** ಯುವ ಮುಖಂಡ.

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಒಕ್ಕಲಗೇರಿ ಓಣಿ ಕೆ.ಇ.ಬಿ. ಹತ್ತಿರವಿರುವ ಭಗತ್‌ಸಿಂಗ್ ಸರ್ಕಲ್‌ನಲ್ಲಿ (ಶಿರಸಂಗಿ ಲಿಂಗರಾಜ ದೇಸಾಯಿ ರಸ್ತೆ) ಭಗತ್‌ಸಿಂಗ್ ಅಭಿಮಾನಿ ಬಳಗದ ವತಿಯಿಂದ ಮಾರ್ಚ್ 23 ರಂದು ಭಗತ್‌ಸಿಂಗ್, ರಾಜಗುರು ಹಾಗೂ ಸುಖದೇವರ 95ನೇ ಹುತಾತ್ಮ ದಿನದ ಅಂಗವಾಗಿ ಪುಷ್ಪಸಮರ್ಪಣೆ ಮತ್ತು ಮೌನಾಚರಣೆ ನಡೆಸಿ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾ ಪ್ರಮುಖ ಮಂಜುನಾಥ ಮುಳಗುಂದ ಮಾತನಾಡಿ, ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವರು ಅತಿ ಕಿರಿಯ ವಯಸ್ಸಿನಲ್ಲಿ ಬ್ರಿಟಿಷರ ವಿರುದ್ಧ ಕ್ರಾಂತಿಯ ದೀಪ ಹಚ್ಚಿ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಚೈತನ್ಯ ತುಂಬಿದ ಮಹಾನ್ ಚೇತನರು ಎಂದು ಹೇಳಿದರು. ಅವರ ಬಲಿದಾನವನ್ನು ಪ್ರತಿಯೊಬ್ಬರೂ ನೆನಪಿಸಿಕೊಳ್ಳಬೇಕು ಎಂದರು.

ಗದಗ ಜಿಲ್ಲಾ ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಮಾತನಾಡಿ, ಒಂದು ಕೋಟಿಗೂ ಹೆಚ್ಚು ಅನುದಾನದೊಂದಿಗೆ ಭಗತ್‌ಸಿಂಗ್, ರಾಜಗುರು, ಸುಖದೇವರ ವೃತ್ತವನ್ನು ನಿರ್ಮಿಸುವ ಯೋಜನೆ ರೂಪಿಸಲಾಗಿದೆ. ಈ ವೃತ್ತವನ್ನು ದೇಶಕ್ಕೆ ಮಾದರಿಯಾಗುವ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಭರವಸೆ ನೀಡಿದರು.

ವಿಜಯಕುಮಾರ ಗಡ್ಡಿ ಮಾತನಾಡಿ, ಇಂದಿನ ಯುವಪೀಳಿಗೆ ಸ್ವಾತಂತ್ರ್ಯ ಹೋರಾಟಗಾರರ ಆದರ್ಶಗಳನ್ನು ಮೈಗೂಡಿಸಿಕೊಂಡು ಸಮಾಜದಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಬಸವರಾಜ ಗುಡದೂರ ಅವರು ಮಾತನಾಡಿ, ರೈತರು ಮತ್ತು ಸೈನಿಕರು ದೇಶದ ಎರಡು ಕಣ್ಣುಗಳಂತೆ ಇದ್ದು, ಇವರಲ್ಲಿ ಭಗತ್‌ಸಿಂಗ್, ರಾಜಗುರು, ಸುಖದೇವರ ಆದರ್ಶಗಳನ್ನು ಕಾಣಬಹುದು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕೊಪ್ಪಳ ಜಿಲ್ಲೆಯ ಅಳವಂಡಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಭಗತ್‌ಸಿಂಗ್ ಸರ್ಕಲ್‌ಗೆ ವಿವಿಧ ತಾಲೂಕು ಹಾಗೂ ಜಿಲ್ಲೆಗಳಿಂದ ಪವಿತ್ರ ಮಣ್ಣನ್ನು ಸಂಗ್ರಹಿಸುವ ವಿಶೇಷ ಅಭಿಯಾನಕ್ಕೆ ಬೆಂಬಲ ಸೂಚಿಸಿ, ಭಗತ್‌ಸಿಂಗ್ ಅಭಿಮಾನಿ ಬಳಗದ ಸದಸ್ಯರಿಗೆ ಸನ್ಮಾನಿಸಿ ಒಂದು ಬೊಗಸೆ ಮಣ್ಣು ಹಾಗೂ ಒಂದು ರೂಪಾಯಿ ನಾಣ್ಯ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಂಜುನಾಥ ಹುಡೇದ, ಶಿವಾನಂದ ಮಣ್ಣೂರ, ವಿಷ್ಣು, ಮಹೇಶ, ಅಭಿ, ಬಸವರಾಜ ಅಬ್ಬಿಗೇರಿ, ದಿಗ್ವಿಜಯ, ನವೀನ, ಸಿದ್ದು, ಗಿರೀಶ, ಅನಿಲ್, ದೀಪಕ್, ಫೈರೋಜ್, ಮುನಾಫ್, ಸುನೀಲ್, ಶ್ರೀಕಾಂತ, ಕೊಟ್ರೇಶ, ರವಿ ಹುಡೇದ, ಸಂಜಯ, ಸುದೀಪ್, ಕಾರ್ತಿಕ್, ದೇವಪ್ಪ, ವಿನಯ, ಅವಿನಾಶ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

# ಹೆಚ್‌ಐವಿ ತಪಾಸಣೆ, ಚಿಕಿತ್ಸೆ ವಿಸ್ತರಣೆಗೆ ಜಿಲ್ಲಾಧಿಕಾರಿ ಸೂಚನೆ

▶▶ ಮೊದಲನೇ ಪುಟದಿಂದ

ಎನ್‌ಜಿಓಗಳಿಗೆ ಅನುದಾನ ಬಿಡುಗಡೆ ವಿಳಂಬವಾಗುತ್ತಿರುವ ಕುರಿತು ಚರ್ಚೆ ನಡೆದಿದ್ದು, ಸಮಸ್ಯೆ ಪರಿಹರಿಸಲು ಸಂಬಂಧಿತ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು “ನಿಮ್ಮ ಹೆಚ್‌ಐವಿ ಸ್ಥಿತಿಯನ್ನು ತಿಳಿದುಕೊಳ್ಳಿ” ಎಂಬ ಕ್ಯೂಆರ್ ಕೋಡ್ ಪೋಸ್ಟರ್ ಬಿಡುಗಡೆ ಮಾಡಿದರು. ರಾಜ್ಯ ಎಸ್‌ವೈಎಂ ಸಂಯೋಜಕ ಡಾ. ದೀಪಕ್ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಬಿ.ಸಿ. ಕರಿಗೌಡರ, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಅರುಂಧತಿ ಕೆ., ಆರ್‌ಸಿಎಚ್ ಅಧಿಕಾರಿ ಡಾ. ಮೀನಾಕ್ಷಿ ಕೆ.ಎಸ್. ಸೇರಿದಂತೆ ಅಧಿಕಾರಿಗಳು ಹಾಗೂ ಎನ್‌ಜಿಓ ಸಿಬ್ಬಂದಿ ಉಪಸ್ಥಿತರಿದ್ದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್. ನೀಲಗುಂದ ಸ್ವಾಗತಿಸಿದರು. ಜಿಲ್ಲಾ ಐಸಿಟಿಸಿ ಮೇಲ್ವಿಚಾರಕ ಬಿ.ಬಿ. ಲಾಳಗಟ್ಟಿ ವಂದಿಸಿದರು.

# ಯಶಸ್ವಿನಿ ಯೋಜನೆ: ಸದಸ್ಯರ ನೋಂದಣಿಗೆ ಅವಕಾಶ

■ ವಿಜಯಸಾಕ್ಷಿ ಸುದ್ದಿ, ಗದಗ

ಸಹಕಾರ ಇಲಾಖೆಯ ವತಿಯಿಂದ 2025–26ನೇ ಸಾಲಿಗೆ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಜಾರಿಗೊಳಿಸಲಾಗಿದ್ದು, ಯೋಜನೆಯಡಿ ಸದಸ್ಯರ ಹೊಸ ನೋಂದಣಿ ಹಾಗೂ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ.

ಕಳೆದ ಸಾಲಿನಲ್ಲಿ ನೋಂದಾಯಿತ ಸದಸ್ಯರು ತಮ್ಮ ಸದಸ್ಯತ್ವವನ್ನು ನವೀಕರಿಸಿಕೊಳ್ಳಬಹುದಾಗಿದ್ದು, ಹೊಸ ಸದಸ್ಯರೂ ಸಹ ನೋಂದಾಯಿಸಿಕೊಳ್ಳಬಹುದು. ನೋಂದಣಿ ಹಾಗೂ ನವೀಕರಣಕ್ಕೆ ಮಾರ್ಚ್ 31 ಕೊನೆಯ ದಿನವಾಗಿರುತ್ತದೆ.

ಅರ್ಹ ಹಾಗೂ ಆಸಕ್ತರು ಯೋಜನೆಯ ಸದುಪಯೋಗ ಪಡೆಯುವಂತೆ ಸಂಬಂಧಿತ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಜಿಲ್ಲಾಡಳಿತ ಭವನ (ಕೊಠಡಿ ಸಂಖ್ಯೆ–125) ಹಾಗೂ ಸಹಾಯಕ ನಿಬಂಧಕರ ಕಚೇರಿ, ಎಪಿಎಂಸಿ ಯಾರ್ಡ್, ಎಸ್‌ಬಿಐ ಮುಖ್ಯ ಶಾಖೆ ಎದುರು, ಗದಗ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 08372–238598.

ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿಗಳ ಸಂಪರ್ಕ ಸಂಖ್ಯೆಗಳು: ನರಗುಂದ–8660099227, ಶಿರಹಟ್ಟಿ–9739247088, ರೋಣ–9538198110, ಮುಂಡರಗಿ–8088386791, ಗದಗ–9945187724.

## ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆ ಪರೀಕ್ಷೆ ದಿನಾಂಕ ಬದಲಾವಣೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1 ಅನ್ನು ಮಾರ್ಚ್ 18ರಿಂದ ಎಪ್ರಿಲ್ 2ರವರೆಗೆ ನಡೆಸಲು ನಿಗದಿಪಡಿಸಲಾಗಿದ್ದು, ಪರೀಕ್ಷೆಗಳು ಈಗಾಗಲೇ ಪ್ರಾರಂಭವಾಗಿವೆ.

ಮೂಲ ವೇಳಾಪಟ್ಟಿಯಂತೆ ತೃತೀಯ ಭಾಷೆಯ ಪರೀಕ್ಷೆಯನ್ನು ಮಾರ್ಚ್ 30ರಂದು ನಿಗದಿಪಡಿಸಲಾಗಿತ್ತು. ಆದರೆ ಸರ್ಕಾರದ ಅಧಿಸೂಚನೆಯನ್ವಯ ಮಹಾವೀರ ಜಯಂತಿ ಪ್ರಯುಕ್ತ ಘೋಷಿಸಲಾದ ಸಾರ್ವತ್ರಿಕ ರಜೆಯನ್ನು ಮಾರ್ಚ್ 31ರ ಬದಲು ಮಾರ್ಚ್ 30ಕ್ಕೆ ಬದಲಾಯಿಸಿರುವ ಹಿನ್ನೆಲೆಯಲ್ಲಿ ಪರೀಕ್ಷೆಯ ದಿನಾಂಕದಲ್ಲಿ ಪರಿಷ್ಕರಣೆ ಮಾಡಲಾಗಿದೆ.

ಇದರಿಂದ ಮಾರ್ಚ್ 30ರಂದು ನಡೆಯಬೇಕಿದ್ದ ತೃತೀಯ ಭಾಷೆ ಪರೀಕ್ಷೆಯನ್ನು ಇದೀಗ ಮಾರ್ಚ್ 31ರಂದು, ಇದೇ ಅವಧಿಯಲ್ಲಿ ನಡೆಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಉಳಿದ ಎಲ್ಲಾ ವಿಷಯಗಳ ಪರೀಕ್ಷೆಗಳು ಪೂರ್ವನಿಗದಿತ ವೇಳಾಪಟ್ಟಿಯಂತೆ ಯಥಾವತ್ತಾಗಿ ನಡೆಯಲಿವೆ.

# ಮುಖ್ಯ ಶಿಕ್ಷಕರ ಹುದ್ದೆಗೆ ಸಹ ಶಿಕ್ಷಕರ ಬಡ್ತಿಗೆ ಆಗ್ರಹ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗಳಿಗೆ ಅರ್ಹ ಸಹ ಶಿಕ್ಷಕರಿಗೆ ಬಡ್ತಿ ನೀಡುವಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಜಿಲ್ಲಾ ಘಟಕವು ಮನವಿ ಸಲ್ಲಿಸಿದೆ. ಗದಗ ಜಿಲ್ಲೆಯಲ್ಲಿ ಈಗಾಗಲೇ ಸಹ ಶಿಕ್ಷಕರ ಹುದ್ದೆಯಿಂದ ಪ್ರಧಾನ ಗುರುಗಳ ಹುದ್ದೆಗೆ ಬಡ್ತಿ ನೀಡುವ ಅಧಿಕಾರ ಆಯುಕ್ತರಿಂದ ಅನುಮೋದಿಸಲಾಗಿದೆ. ನೇಮಕಾತಿ ಪ್ರಾಧಿಕಾರ ಶಾಲಾ ಶಿಕ್ಷಣ ಇಲಾಖೆಗೆ ನೇರವಾಗಿ ಹೊಂದಿರುವುದರಿಂದ, ಶೀಘ್ರದಲ್ಲಿಯೇ ಪ್ರಧಾನ ಗುರುಗಳ ಬಡ್ತಿ ಕೌನ್ಸಲಿಂಗ್‌ನ ವೇಳಾಪಟ್ಟಿಯನ್ನು ಬಿಡುಗಡೆ ಮಾಡುವ ಅಧಿಕಾರವೂ ಅವರಿಗಿದೆ. ಸಂಘವು 01–01–2026 ರ ದಿನಾಂಕದಂತೆ ಜೇಷ್ಠತಾ ಪಟ್ಟಿಯನ್ನು ಬಿಡುಗಡೆ ಮಾಡುವಂತೆ ವಿಶೇಷವಾಗಿ ಮನವಿ ಮಾಡಿದೆ.

ಪ್ರಧಾನ ಗುರುಗಳ ಹುದ್ದೆಯಿಂದ ಹಿರಿಯ ಪ್ರಧಾನ ಗುರುಗಳ ಹುದ್ದೆಗೆ ಬಡ್ತಿ ನೀಡಿದ ಹಾಗೂ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರ ಹುದ್ದೆಯಿಂದ ಪ್ರೌಢಶಾಲೆಗೆ ಬಡ್ತಿ ನೀಡಿದ್ದು ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ಬಡ್ತಿ ಕೊಟ್ಟ ಕೀರ್ತಿ ತಮಗೆ ಸಲ್ಲುವದು. ಆದ್ದರಿಂದ ಈ ವಿಷಯವಾಗಿ ವಿಳಂಬಕ್ಕೆ ಅವಕಾಶ ನೀಡದೇ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಪ್ರಧಾನ ಗುರುಗಳ ಹುದ್ದೆಗೆ ಬಡ್ತಿ ನೀಡಬೇಕೆಂದು ಮನವಿಯಲ್ಲಿ ವಿನಂತಿಸಲಾಗಿದೆ.

ಮನವಿ ಸ್ವೀಕರಿಸಿರುವ ಗದಗ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರಡಿ ಈ ಸಂಬಂಧ ಅಗತ್ಯ ಕ್ರಮ ಶೀಘ್ರದಲ್ಲಿ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಹಿರೇಮಠ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಮಹೇಶ್ ಕುರಿ, ಉಪಾಧ್ಯಕ್ಷ ಎಂ.ವೈ. ಜಕ್ಕರಸಾನಿ, ಸಹ ಕಾರ್ಯದರ್ಶಿ ಮೋಹನ್ ಮೆಣಸಿನಕಾಯಿ, ಕೋಶಾಧ್ಯಕ್ಷ ಎ.ಕೆ. ವಂಟಿ, ಸಹಕಾರ್ಯದರ್ಶಿ ಹರ್ತಿ, ಗದಗ ಗ್ರಾಮೀಣ ಅಧ್ಯಕ್ಷ ಎಸ್.ಆರ್. ಬಂಡಿ, ಪ್ರಧಾನ ಕಾರ್ಯದರ್ಶಿ ಎನ್.ಟಿ. ಪಾಟೀಲ, ರೋಣ ಅಧ್ಯಕ್ಷ ಐ.ಡಿ. ಗಾಣಿಗೇರಿ ಸೇರಿದಂತೆ ಸಂಘದ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.


ಕರ್ನಾಟಕ ಸರ್ಕಾರ
(ಜಿಲ್ಲಾ ಪಂಚಾಯತ್, ಗದಗ)
**ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ**
**ತಾಲೂಕಾ ಆಸ್ಪತ್ರೆ, ನರಗುಂದ ತಾ॥ ನರಗುಂದ, ಜಿ ॥ ಗದಗ**
**e-mail : amotlhnrd@gmail.com**
ಕ್ರ.ಸಂ: ತಾ.ಆ.ನ/ಸಿ.ಪ.ಪ/ಟೆಂಡರ್/400/2025–26 ದಿನಾಂಕ : 25–03–2026

**ಟೆಂಡರ್ ಪ್ರಕಟಣೆ**

ತಾಲೂಕಾ ಆಸ್ಪತ್ರೆ ನರಗುಂದ ಇಲ್ಲಿಗೆ 2026–27 ನೇ ಸಾಲಿಗೆ ಸಿದ್ಧಪಡಿಸಿದ ಪಥ್ಯಾಹಾರ & ಉತ್ತಮ ಗುಣಮಟ್ಟದ ಪುಡಿಯಿಂದ ಮಾಡಿದ ಕಾಫಿ/ಟೀ ಮತ್ತು ಉತ್ತಮ ದರ್ಜೆಯ ಬ್ರೆಡ್ ಸರಬರಾಜು ಮಾಡುವ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ ಮೂಲಕ **Tender Reference No– DHFWS/2025-26/SE2104** ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ.

**ಸಹಿ/– ಆಡಳಿತ ವೈದ್ಯಾಧಿಕಾರಿಗಳು**
ವಾಸಾಸಂಇ/ಗದಗ/ಕೆಎಸ್‌ಎಂಸಿಎ/729/2025–26 **ತಾಲೂಕ ಆಸ್ಪತ್ರೆ ನರಗುಂದ**



ಕರ್ನಾಟಕ ಸರ್ಕಾರ

**ಗದಗ–ಬೆಟಗೇರಿ ನಗರಸಭೆ ಕಾರ್ಯಾಲಯ–582101**

ಜಿಲ್ಲಾ : ಗದಗ ರಾಜ್ಯ : ಕರ್ನಾಟಕ
ದೂ : 08372–259932 ಇ–ಮೇಲ್ : ka.gadag.betageri.cmc@gmail.com
ನಂ.ಗಬೆನಸ/ತಾಂ.ವಿ/ವಹಿ/ಟೆಂಡರ್/2025–26 ದಿನಾಂಕ : 26–03–2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999–2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡ್ಯಾಕ್ಯೂಮೆಂಟ್ಸ್ ನಿಯಮದನ್ವಯ ಗದಗ–ಬೆಟಗೇರಿ ನಗರಸಭೆಯ ಸನ್ 2020–21 ನೇ ಸಾಲಿನ 15ನೇ ಹಣಕಾಸು ಯೋಜನೆಯ **MPC&NMPC** ನಿರ್ಭಂದಿತ **(Tied Graunt)** ಉಳಿಕೆ ಅನುದಾನದ ಮೊತ್ತ ರೂ. 3.30 ಲಕ್ಷಗಳಿಗೆ ಒಟ್ಟು 01 ಕಾಮಗಾರಿಗೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ–ಸಂಗ್ರಹಣಾ ವೇದಿಕೆಯಡಿ ಇಂಡೆಂಟ್ ನಂ: 1) **DMA/2025-26/OW/WORK INDENT-56731http://kcppp.karnataka.gv.in** ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ. ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು **Electronic** ಪದ್ಧತಿಯಲ್ಲಿ ತುಂಬಿ ನಿಗದಿಪಡಿಸಿದ ದಿನಾಂಕಗಳೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

| | |
|---|---|
| ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: | 06–04–2026 Up to 16.00 Hours |
| ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids) | 07–04–2026 Up to 16.30 Hours |

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ **kppp portal** ನಲ್ಲಿ ಪ್ರಕಟಿಸಲಾಗುವುದು. ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–
**ಪೌರಾಯುಕ್ತರು, ಗದಗ–ಬೆಟಗೇರಿ ನಗರಸಭೆ**


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka